Azim Premji Foundation

June - 2016

Issue No.: 46

# ಬಯಲು Bayalu

*....a space of our own*



“ನವ ಜೀವನಕ್ಕೆ ಕಾಲಿರಿಸಿದ ನವದಂಪತಿಗಳಿಗೆ ಹಾರ್ದಿಕ ಶುಭಾಶಯಗಳು”

ಬಯಲು ಪತ್ರಿಕೆಗಾಗಿ ಕಂಕಣಬದ್ದರಾಗಿ ದುಡಿದ ನಿಮ್ಮ ಬಾಳು ಸುಂದರ ಹೂಬನದಂತೆ ಸದಾ ಹಚ್ಚ–ಹಸಿರಾಗಿ ಬಣ್ಣ–ಬಣ್ಣದ ಹೂಗಳ ಕಂಪಿನಂತೆ ಯಾವಾಗಲೂ ಸಂಪಾಗಿರಲೆಂದು ಹಾರೈಸುವ

–ಅಜೀಮ್ ಪ್ರೇಮಜೀ ಫೌಂಡೇಷನ್‌ನ ಸರ್ವಸದಸ್ಯರು



# Table of Contents


1. Male dominance - Reflection on male dominance by Parveen Banu ..... 4
2. ದೃಷ್ಟಿಯಂತೆ–ಸೃಷ್ಟಿ (The Nature as we percieve) by Gangadhar Swamy ..... 5
3. For our own Sustainable Future by Rajesh S Mahantmath ..... 6
4. ಯಾವ ಮಾಯೆಯ ನಿಯಂತ್ರಣದಲ್ಲೀ ಬದುಕು (Under whose control the living is) by Hameed Manjeshwar...... ..... 7
5. ತಟ್ಟಿದ ಶಾಪ (The Curse) by Anwar M ..... 8
6. The Digital Dump by Sachin Salakki ..... 8
7. ನೀನಾರಿಗಾದೆಯೋ ಎಲೆ ಮಾನವ?(Man, whom you are useful for) by Raghavendra Herale ..... 11
8. ಅಮ್ಮಾ ಶಾಲೆ ಯಾವಾಗ ಆರಂಭ ಆಗತ್ತೆ? (Mom, When school starts) by Sujatha Koppalkad ..... 12
9. ಪಾಠ ಹೇಳೋ ಪ್ರಕೃತಿ(Nature teaches Lesson) by Sudrshan ..... 13
10. ಸ್ವಗತ (The Self-reflection) by Sarala ..... 14
11. Go Green – A long way to go by Peri ..... 15
12. ಭೂಮಿ ಹೋಮ (The Earth) by Ramachandra Bhat ..... 16
13. ಹಸಿರು–ಉಸಿರು (Green is Life) by Bhavya ..... 16
14. ಆ 2 ಮರಗಳ ನಾಪತ್ತೆ (The demise of 2 tree) by Srilatha ..... 17
15. ಕಸ ವಿಷವಾಗುವ ಮುನ್ನ ಎಚ್ಚೆತ್ತುಕೊಳ್ಳಿ. (Wake up before the Trash turns into poison) by Ramesh Badiger ..... 18
16. ದುಂಬಿ (The Beetle) by Karishma ..... 19
17. ಮರದ ಅಳಲು (The sorrow of Tree) by Ganapathi Bhat.. ..... 20
18. ಪರಿಸರದ ದಾನವ ಯಾರು? (Who is the demon for Nature) by Giridhar Vaydya ..... 20
19. ಅಂದಿನ ನಮ್ಮೂರು(My Village in the past) by Gundappa Katekar ..... 21
20. Cool Cliks ..... 22

## 1. Male dominance - Reflection on male dominance

-Parveen Banu

When we look at some of the circumstances in the society it looks as if male dominance has come down. It appears to be so when we compare with the past days. But it is not very true according to me. The dominance still prevails amidst us and we practice it knowingly and unknowingly. It will take lots of time to change because it is deep rooted in us like a tree standing upright on a nurturing soil. So it is in our society seen and unseen.

When I think that we observe changes in the society, I also reflect that changes in old beliefs, in traditions and in cultures are only superficial. The spirit of dominance still remain inherent. Come I will show some examples which don't support that things have changed.

Widows are getting married. This is the one change we observe and quote. But I know some live examples of suffering women. I would like to share with you about one lady. She got married but was unable to bear a child. Because of this reason her husband left her without checking who was responsible for that. It might be the man himself who was responsible! But no checking of the man's virility.



Next her parents married her to another person 20 years older than her. The person had 5 married children and he had grandchildren too. Without asking the permission of that lady their parents had fixed her marriage with the person. They had done so to save themselves from a society which was sarcastic about her and about her parents.

Now the culture is that women should go to their husband's home. Because she is treated as his property.

When someone would come to see a girl for marrying people accompanying him would see her from top to bottom. They would tell her to walk, to sing, to do this and that, and there would be many dramas whether the girl likes it or not. Once selected it is like being sold. And it is typically asked, "Where you did or who you did give your daughter to?"

Can it happen that a man after marriage would go to the girl's home as a *Ghar Jamayi*? When we look at the rationale behind this the truth of male dominance comes to us.

In some cultures women change their name after marriage. It is very bad according to me. It is losing one's identity. She would be changing a name with which she might have lived quite a long time. She might have attachment of sorts, associated memories and an identity linked to a family she was born in. Marriage is like uprooting to a girl in many ways. As a plant would get wilted when uprooted so would a girl's life after marriage on occasions. I wish people who practice such a culture, after reading this article, change that and start respecting women. If you think that I am talking wrong, then such of you please change your name for one month and try!

One more change which we could observe are cases of inter cast marriages. This is a change done by youth because they love and are in relationship. They marry which is good but in those cases also women suffer. Because she has to change her cast or religion. Her parents has to suffer bad comments from the society. Usually the boy's parents would not accept her.

I am aware of instances where well educated persons prefer girls who live in the villages. This seems to be good. But the real reason is that they are afraid of educated women. The educated would be aware of what is good and bad. The men are afraid of such women getting control over them. They cannot treat them as they would like. Also because of their education they might obtain higher position and status in society, and they might fight for their rights.

The established culture in Indian system is to wear sarees. If we know why we wear clothes then one should have the right to choose the clothing herself. Generally that is not the case.

Leave the girls to live as they like to live and don’t put any burden on them as we would do with ornamental plants. Anything unnatural would pollute and the plants would wither without blooming. Not that women don’t need support but the support need not choke her to death. I don’t mean that men are bad because they are men. I respect all who respect womanhood against the values of patriarchy.

Let her grow like lush green plants do in open breeze nurtured by water and tendered by healthy minds.

***

## 2. ದೃಷ್ಟಿಯಂತೆ–ಸೃಷ್ಟಿ

–ಗಂಗಾಧರಸ್ವಾಮಿ.ಎಸ್

ಎನ್ನವಳೊಮ್ಮೆ ಕೇಳಿದಳು
ತೋಟದಲ್ಲಿ ಹೂ ಅರಳಿದೆ
ದುಂಬಿ ಇನ್ನು ಮಲಗಿದೆ
ಎಂದರೇನು ಬಿಡಿಸಿ ಹೇಳುವೆಯಾ ಎಂದು

ಪ್ರಿಯೇ, ಅವರವರ ನೋಟಕ್ಕೆ ಅವರವರ ಭಾವಕ್ಕೆ
ಅದ ಹುಡುಕಲು ಬಿಡಬೇಕಲ್ಲವೇ
ಕವಿಯ ಭಾವವೊಂದು ಓದುಗರ ಭಾವವೊಂದು
ನನ್ನ ಭಾವವೊಂದು ನಿನ್ನ ಭಾವವೊಂದು
ಭಾವ ಬಿಂದುಗಳ ಹೊಳಹುಗಳಿಗಿಹುದು ಅರ್ಥವೊಂದೊಂದು



ಪ್ರಕೃತಿ ಎಲ್ಲವನು ನಮಗೆ ನೀಡಿರುವಾಗ
ನರಮಾನವರು ತಮ್ಮ ಸೃಷ್ಟಿಯ ಆನಂದಕೆ ಬಿಳುತಿಹರು
ಹೊಸತನದ ಬದುಕು ನಮ್ಮೆದುರಿಗಿರುವಾಗ
ಸಂಪ್ರದಾಯದ ಮಡಿಲಲಿ ಹಾಯಾಗಿ ಮಲಗಿಹರು ನಮ್ಮ ಜನ ಅಲ್ಲವೇ

ಪ್ರೀತಿಯ ಸಾಗರದಿ ಪ್ರಯಣಿಸುವ ಆಸೆಯಿಂದ ನಾ ಬಂದಾಗ
ಸಮಾಜದ ಕಟ್ಟುಪಾಡಿಗೆ ನೀ ದೂರ ಹೋದೆಯಲ್ಲವೇ
ತೋಟದಲಿ ಹೂ ಅರಳಿದೆ ದುಂಬಿ ಇನ್ನೂ ಮಲಗಿದೆ
ಕವಿಯ ಭಾವವೊಂದು ಓದುಗರ ಭಾವವೊಂದು
ನನ್ನ ಭಾವವೊಂದು ನಿನ್ನ ಭಾವವೊಂದು
ಭಾವ ಬಿಂದುಗಳ ಹೊಳಹುಗಳಿಗಿಹುದು ಅರ್ಥವೊಂದೊಂದು

## 3. For our own Sustainable Future.

**-** Rajesh S Mahantmath

India has had a long tradition of environmental conservation. Post-independence the increasing population, urbanization and demand for more production has put an enormous stress and strain on the natural resources. Either due to individual circumstances, or due to socio-economic problems our society got deviated from its sustainable life-style that had remained largely unchanged over the centuries. As a result there has been a decline in the overall forest cover of the country and today only about 23.8% of our country is under forest cover (World Bank, 2015). Many floral and faunal species have become extinct. Many ecosystems have become degraded. Due to loss of habitat there is a danger to the survival of the remaining animals in the forests. Against this backdrop, it will be worthwhile to look back at the environment friendly principles and practices of our ancestors and try to imbibe them.

We can see many examples of environment friendly practices in the day-to-day life style, culture and traditions of ancient Indians. Ancient Indians revered the earth as 'mother'. *'Ahimsa'* (non-violence) the first precept of *Dharma* (true religion) dictates that humans should treat not only fellow human beings but also all living beings with non-violence. People in ancient India may not have been strict vegetarians but they certainly did not engage in wanton slaughter of animals. They believed in *'Aparigraha'* (non-hoarding), *'Asteya'* (non-stealing) and *'Daana'* (generosity).

Our ancestors knew the medicinal properties and air purifying properties of plants and their role in enabling good precipitation. They accorded great importance to the nurturing of new trees and protection of old trees.

**Dashakoopa Samaavaapi, Dashavaapi Samohrudah: I**
**Dashahrud Samoputro, Dashaputro Samo Drumah: II**

According to this shloka, one who plants a tree gains the virtue of digging ten wells or giving birth to ten sons. Ancient people have honored trees by calling them 'Mahatma' or great souls.

We all have read in childhood the story of the old grandfather who continues to plant mango saplings so that his grandchildren may eat the fruits one day. This short and simple story gives us a message that after enjoying the benefits of nature we should ensure that the same natural resources will be available to our future generations too. Considering the importance of trees everybody must try to plant as many trees as possible and contribute in environmental conservation.



In ancient times people believed that certain trees or forest areas were the abode of tree spirits or deities and accorded protection to these 'sacred groves'. Today, we see find a lot of biodiversity in the few surviving sacred groves. It seems that many rulers of Mauryan, Mughal, Maratha and other dynasties also accorded protection to forest areas, perhaps, because they saw their importance as source of raw materials and strategic protection to their forts and palaces.

The local rulers also devoted their time and attention to the construction of wells and reservoirs for the

benefit of the common people. People in different parts of the country considered it sacrilegious to hunt or kill different types of animals and due to this many animals and birds automatically got protection. The genetic diversity is fast eroding due to largescale deforestation and monoculture of a select variety of crops. The abuse of agrochemicals has increased the problems of air and water pollution. We humans are succumbing to newer diseases. We have lost harmony with nature and lost the happiness of life itself as Samuel Johnson said:

**Deviation from Nature is Deviation from Happiness.**

This does neither mean that we have to stop all scientific and technological activities, renounce everything and go and stay in the forests, nor that, in the pretext of development we have to forget our traditions and culture and blindly imitate the developed countries. We must learn to strike a balance between our needs and wants. We must try to reduce, reuse, repair and recycle as much as possible and adopt a simple lifestyle for our own sustainable future.

***

## 4. ಯಾವ ಮಾಯೆಯ ನಿಯಂತ್ರಣದಲ್ಲೀ ಬದುಕು......

– **ಹಮೀದ್ ಮಂಜೇಶ್ವರ್**



ಇತ್ತೀಚೆಗೆ ನಾನು ಒಬ್ಬರ ಜೊತೆಗೆ ಮಾತಾಡುತ್ತಾ ಕೂತುಕೊಂಡಿದ್ದೆ. ಅಷ್ಟರಲ್ಲಿ ಕೈಯ್ಯಲ್ಲಿ ಮೊಬೈಲ್ ಹಿಡಿದುಕೊಂಡು ಅಲ್ಲಿಗೆ ಬಂದ ಆತ 'ಸಾರ್ ನಾನು 256ರಲ್ಲಿದ್ದೇನೆ ಎಂದರು. ಬಹಳ ಖುಷಿ ಸಂಭ್ರಮದಲ್ಲೇ ಹೇಳಿದರು. ನಮಗೆ ಏನೂ ಅರ್ಥ ಆಗಲಿಲ್ಲ. ಮುಖ ಮುಖ ನೋಡಿಕೊಂಡೆವು. ಏನು ಎಂಬಂತೆ ಆ ವ್ಯಕ್ತಿಯ ಮುಖ ನೋಡಿದೆ. 'ಅದೇ ಸಾರ್ ಕ್ಯಾಂಡಿಕ್ರಸ್. 256ನೇ ಲೆವೆಲ್‌ಗೆ ತಲುಪಿದ್ದೇನೆ' ಎಂದರು. ಅದೇನೋ ಸಾಧನೆಯ ಸಂಖ್ಯೆ ಎಂದುಕೊಂಡವರಿಗೆ ಗೊತ್ತಾಗಿದ್ದು. ಮೊಬೈಲ್‌ನಲ್ಲಿ ಆಟದ ದಾರಿ ಹಿಡಿದು ಹೊರಟ ಮೈಲಿಗಲ್ಲುಗಳು!

●

ಕಳೆದ ವಾರ ನಾನು ಕೊಪ್ಪಳದಿಂದ ಹೊಸಪೇಟೆಗೆ ಬಸ್ಸಲ್ಲಿ ಪ್ರಯಾಣಿಸುತ್ತಿದ್ದೆ. ನನ್ನ ಹಿಂದಿನ ಸೀಟಲ್ಲಿ ಒಬ್ಬ ವ್ಯಕ್ತಿ ಮತ್ತು ಒಂದು ಎರಡೂವರೆ ಮೂರು ವರ್ಷ ಅಂದಾಜು ವಯಸ್ಸಿನ ಮಗು ಕೂತುಕೊಂಡಿದ್ದರು. ನಿನಗೆ ಕಿಟಿಕಿ ಪಕ್ಕದ ಸೀಟು ಬೇಕಾ ಕೂತುಕೋ ಎಂದು ಆತ ಹೇಳುತ್ತಿದ್ದ. ಮಗು ನೀರು ಬೇಕು ಅಂದಿತು. ಕಿಟಿಕಿ ಪಕ್ಕದಲ್ಲಿ ಜಾಗೃತೆ ಎಂದ. ಮತ್ತೆ ಮಗು ನೀರು ಎಂದಿತು. ಆಯ್ತು ಅಲ್ಲೇ ಕೂತುಕೋ ಎಂದ. ಮಗು ಇನ್ನೊಮ್ಮೆ ನೀರು ಎಂದಿತು. ಹೊಸಪೇಟೆ ಬರಲಿ ಎಂದ ಆತ. ಬಸ್ಸು ಅದು ತಾನೆ ಕೊಪ್ಪಳ ಬಸ್ಸು ನಿಲ್ದಾಣದಿಂದ ಹೊರಟಿತ್ತು. ಹೊಸಪೇಟೆಗೆ ಒಂದೂ ಕಾಲು ಗಂಟೆಯ ಪಯಣ. ನಾನು ಹಿಂದೆ ತಿರುಗಿ ನೀರಿನ ಬಾಟಲಿ ಕೊಟ್ಟೆ. ಆತ ಒಂದು ಕಿವಿಯಿಂದ ಇಯರ್‌ಪೋನ್ ತೆಗೆಯುತ್ತಾ 'ಏನು' ಎಂಬಂತೆ ನೋಡಿದ. ಮಗು ನೀರು ಕೇಳುತ್ತಿದೆ ಕೊಡಿ ಎಂದೆ. ಥ್ಯಾಂಕ್ಸ್ ಎಂದು ನೀರಿನ ಬಾಟಲ್ ತೆಗೆದುಕೊಂಡು ಮಗುವಿಗೆ ನಿರು ಕುಡಿಸಿದ.

●

ಮೊನ್ನೆ ಬಸ್ಸು ಸಿಗಲಿಲ್ಲ ಎಂದು ಟ್ರಾಕ್ಸ್‌ನಲ್ಲಿ ಪ್ರಯಾಣಿಸುತ್ತಿದ್ದೆ. ಚಾಲಕನ ಪಕ್ಕದಲ್ಲೆ ಕೂತಿದ್ದೆ. ರಾತ್ರಿ ಸಮಯ. ಆತ ಒಂದು ಕೈಯ್ಯಲ್ಲಿ ಮೊಬೈಲ್ ಹಿಡಿದು ಮಾತಾಡುತ್ತಾ, ಇನ್ನೊಂದು ಕೈಯಿಂದ ಗೇರ್ ಚೇಂಗ್ ಮಾಡುತ್ತಿದ್ದ. ಎದುರಿನಿಂದ ಪ್ರಕಾಶಮಾನ ಬೆಳಕಿನೊಂದಿಗೆ ಲಾರಿಗಳು ಬರುತ್ತಿದ್ದವು. ಕ್ಷಣ ವಾಹನ ಕದಲಿದರೂ..... ವಾಹನ ಬದಿಗೆ ನಿಲ್ಲಿಸಿ ಮಾತಾಡಿ ಎಂದೆ. ಓ ಅದ್ಯಾಕೆ ನನಗೆ ಅನುಭವ ಇದೆ ಎಂದ.

●

ಬಳ್ಳಾರಿಯಲ್ಲಿ ನಾವು ಓಡಾಡುವಾಗ ಒಂದು ದೃಶ್ಯ ಕಣ್ಣಿಗೆ ಬಿತ್ತು. ಒಂದು ರೈಲ್ವೆ ಕ್ರಾಸಿಂಗ್‌ನ ಗದ್ದಲದ ರಸ್ತೆ ದಾಟುವಿಕೆಯಲ್ಲೂ ಒಬ್ಬಾತ ಮೊಬೈಲ್ ಕಿವಿಗೆ ಆನಿಸಕೊಂಡು, ಕತ್ತು ವಾಲಿಸಿ ಬೈಕ್ ಚಲಾಯಿಸುತ್ತಿದ್ದ.

ಇವುಗಳೆಲ್ಲಾ ತೀರಾ ಇತ್ತೀಚೆಗಿನ ನನ್ನ ಅನುಭವಗಳಲ್ಲಿ ಒಂದೆರಡು ಉದಾಹರಣೆಗಳಷ್ಟೆ. ಗ್ಯಾಜೆಟ್ಟುಗಳು ನಮ್ಮ ಬದುಕನ್ನು ಹೇಗೆ ಆವರಿಸಿಕೊಂಡಿದೆ ಎಂಬುದಕ್ಕೆ ಕೆಲವು ಸಾಕ್ಷಿಗಳಾಗಬಹುದು. ಬಸ್ಸು, ರೈಲು, ಕಚೇರಿ, ಸಭೆ ಎಲ್ಲಾ ಕಡೆ ಒಂದೇ ಚಿಂತನೆ ಕ್ಯಾಂಡಿಕ್ರಸ್ ಮುಂದಿನ ಹಂತವನ್ನು ತಲುಪುವ ಬಗ್ಗೆ. ಒಂದು ಆಟ ಉಳಿದೆಲ್ಲಾ ಅಗತ್ಯಗಳನ್ನು ಬದಿಗೆ ಸರಿಸಿದೆಯೇ? ಮೊಬೈಲ್‌ಗಳು ಬದುಕಿನೊಟ್ಟಿಗೆ ಆಟ ಆಡುತ್ತಿದೆಯೇ?

ತಂತ್ರಜ್ಞಾನ ಮತ್ತು ಅದರ ಉತ್ಪನ್ನಗಳು ನಮ್ಮ ಅಗತ್ಯಗಳನ್ನು ಪೂರೈಸಬೇಕು. ಅವಶ್ಯಕತೆಗಳಿಗೆ ಸಹಾಯವಾಗಬೇಕು ನಿಜ. ಆದರೆ ಅವುಗಳೇ ನಮ್ಮ ಆವಶ್ಯಕತೆಗಳಾಗಬಾರದು. ನಮ್ಮ ಅಗತ್ಯಗಳನ್ನು ಪೂರೈಸಬೇಕಾಗಿದ್ದ ಮೊಬೈಲ್ ಮತ್ತು ಅಂತಹ ಉಪಕರಣಗಳು ನಮ್ಮನ್ನು ನಿಯಂತ್ರಿಸುತ್ತಿದೆ. ಸಂಬಂಧಗಳನ್ನು, ಸಭೆಗಳನ್ನು ಮರೆತೂ ಅವುಗಳ ಮೊರೆ ಹೋಗುತ್ತೇವೆ. ಅದರ ಸಮ್ಮೋಹಿನಿಯಲ್ಲಿ ಕಳೆದುಹೋಗುತ್ತೇವೆ. ಇವುಗಳನ್ನು ಯೋಚಿಸಿ ಬಳಸುವುದು, ಅಗತ್ಯಕ್ಕೆ ಬಳಸುವುದು ಸೂಕ್ತವಲ್ಲವೇ?

***

## 5. ತಟ್ಟಿದ ಶಾಪ.

**– ಅನ್ವರ ಎಮ್.**



ಉಸಿರೆ ಉಸಿರೆ
ಈ ಹಸಿರ ಕೊಲ್ಲಬೇಡ
ಸ್ವಾರ್ಥದ ಹೆಸರಲಿ
ಈ ಭೂಮಿ ಅಗೆಯಬೇಡ.
ಉಸಿರೆ ಉಸಿರೆ
ಈ ಹಸಿರ ಕೊಲ್ಲಬೇಡ
ಮಳೆಯಿಲ್ಲದೆ ಕರಗಿದೆ ಕೆರೆಯು
ನೋವಲ್ಲಿಯು ಮುಳಗಿದೆ ಬಾವಿಯು
ನೀರಿಲ್ಲದೆ ಸಾಯುತಿದೆ ಜೀವವು.
ಉಸಿರೆ ಉಸಿರೆ
ಈ ಹಸಿರ ಕೊಲ್ಲಬೇಡ
ಹಸಿರಿಲ್ಲದೆ ಹೆಚ್ಚಿದೆ ತಾಪ
ಭೂತಾಯಿಗೆ ಹೆಚ್ಚಿದೆ ಕೋಪ
ಅದಕ್ಕಾಗಿ ತಟ್ಟಿದೆ ಶಾಪ.

***

## 6. The Digital Dump

-Sachin Salakki

Over four million people purchased the new Apple iPhone 4S during the first weekend that the updated device was available for sale. Most of these newly purchased phones replaced older phones, which were likely discarded. Where these discarded cell phones have gone? Was it that we have threw off just like that? Yes you are right, these new inventions of man keep on taking the human race to the next level day by day. Though these inventions are beneficiary to the better living and life style of human being, sometimes it also creates adverse effects on environment which in turn affects the people on this earth. Thus it has become a great challenge for us to protect and preserve the nature from the destructions of modern technology.



Globalization and information technology are being widely recognized as main drivers of the human civilization in the later part of twentieth century and the 21st century. Day by day the usage of electronic

and electrical equipment are multiplying. So as the need for the computers and electronic gadgets also is increasing every day, which creating other kind of waste that is e-waste. E-waste has become one of the major problems today. So, there is need for saving the people from the e-waste phenomenon.

As an accelerating cycle of innovation drives the consumer electronics market forward, consumers are purchasing new devices and discarding their older models at an increasing rate. Discarded electronic products, including cell phones, televisions, and computers, account for tens of millions of discarded items each year, causing electronic waste ("e-waste") to continue to grow as a percentage of solid waste. While many states have recycling programs that will renovate old cell phones or responsibly dispose of their toxic components, these programs often are not widely known or advertised. Only a small portion of these products is recycled (12.5% annually worldwide), compounding their presence in our nation's landfills or the prevalence of chemicals that leak into the environment due to improper disposal. These harms can be avoided through refurbishment or recycling programs, which provide an environmentally friendly disposal method and save valuable landfill space. The problems associated with e-waste are not insurmountable.

The electronic industry is the world's largest and fastest growing manufacturing industry. E-waste is a relatively new and also the fastest growing segment worldwide in discarded waste. This growing problem in the world is largely ignored or misunderstood. Many people do not understand what it is or how it affects them, the world, or the environment. So the question "What is e-waste" needs to be addressed before any solutions can be effective. Electronic waste (e-waste) comprises waste electronics/electrical goods that use or have reached their end of life. This may include items such as computers, servers, mainframes, monitors, CDs, printers, scanners, copiers, calculators, fax machines, battery cells, cellular phones, transceivers, TVs, medical apparatus, refrigerators and air-conditioners. E-waste contains valuable materials such as copper, silver, gold and platinum which could be processed for their recovery.

**Facts about e-waste:** India is the 5$^{th}$ biggest generators of e-waste in world, just behind the U.S., China, Japan and Germany, discarding 1.7 million tonnes (Mt) of e-waste in 2014. A UN report has warned that the volume of global e-waste is likely to rise by 21% in next 3 years. Most of e-waste in the world was generated in Asia at 16 Mt or 3.7 kg per inhabitant. The top three Asian nations with the highest e-waste generation in absolute quantities are China (6.0 Mt), Japan (2.2 Mt) and India (1.7 Mt). The top per capita producers by far are the wealthy nations of northern and western Europe, the top five being Norway, Switzerland, Iceland, Denmark, and the U.K. The lowest amount of e-waste generated in Africa is 1.9 Mt (1.7 kg/inhabitant). While only 7% of e-waste last year was made up of mobile phones, calculators, personal computers, printers, and small information technology equipment, almost 60% was a mix of large and small equipment used in homes and businesses, such as vacuum cleaners, toasters, electric shavers, video cameras, washing machines, electric stoves, mobile phones, calculators, personal computers and lamps. The report said less than one-sixth of last year's e-waste is thought to have been diverted from landfills to recycling and reuse. The e-waste generated in 2014 contained an estimated 16,500 kilotons of iron, 1,900 kilotons of copper, 300 tonnes of gold (equal to 11% of the world's total 2013 gold production), as well as silver, aluminium, palladium plastic and other resources with a combined estimated value of USD 52 billion. Toxins in that e-waste include 2.2 Mt of lead glass, 0.3 Mt of batteries, as well as mercury, cadmium, chromium and 4,400 tonnes of ozone-depleting substances (CFCs). There are 10 states that contribute to 70% of the total E-Waste generated in India. 65 cities generate more than 60% of the total E-Waste in India. Among the top 10 cities generating E-Waste, Mumbai ranks first followed by Delhi, Bengaluru, Chennai, Kolkata, Ahmedabad, Hyderabad, Pune, Surat &

Nagpur. Out of total E-Waste volume in India Television - 68%, Desktop and Server - 27%, Imports - 2%, Mobile - 1%.
It is estimated that more than 50MT E-Waste is generated globally every year. A report of the United Nations predicted that by 2020, E-Waste from old computers would jump by 400% on 2007 levels in China and by 500% in India. Additionally E-Waste from discarded mobile phones would be about 7 times higher than 2007 levels in China and in India 18 timers higher by 2020. Generation of E-Waste in 2012 in India was 8 lakh tonnes and annual growth rate of E-Waste generation is 10%. India is one of the largest waste importing countries in the world. It generates about 350000 tonnes of electronic waste every year and imports another 50000 tonnes. How much waste is in 500 million computers – Plastic - 6.32 Billion Pounds, Lead - 1.58 Billion Pounds, Cadmium - 3 Million Pounds, Chromium - 1.9 Million Pounds, Mercury - 0.632 Million Pounds. For every 1 million cell phones that are recycled, 35,274 lbs of copper, 772 lbs of silver, 75 lbs of gold, and 33 lbs of palladium can be recovered. Recycling 1 million laptops saves the energy equivalent to the electricity used by 3,657 U.S. homes in a year. It takes 530 lbs of fossil fuel, 48 lbs of chemicals, and 1.5 tons of water to manufacture one computer and monitor. The bulk of the world's e-waste is being shipped to Nigeria, Ghana, Pakistan, India, and China, among others. While it seems odd that a country would willingly import another's waste, the waste is imported, sometimes illegally. This practice provides jobs and valuable scraps.

Currently, around the world, the volume of obsolete computers and other E-Wastes temporarily stored for recycling or disposal is growing at an alarming rate causing enormous environmental and health hazard to any community. Health problems associated with such toxins include impaired mental development, cancer, and damage to livers and kidneys, the report added. The escalating global e-waste problem is driven by the rising sales and shortening life cycles of electrical and electronic equipment. "Worldwide, e-waste constitutes a valuable 'urban mine'- a large potential reservoir of recyclable materials. At the same time, the hazardous content of e-waste constitutes a 'toxic mine' that must be managed with extreme care". Tons and tons of e-waste is dumped each year and the problems continues to grow. The tasks we have assign are intended to increase awareness of this global situation and encourage students to research not only the problem, but potential solutions. The numbers are mind blowing and awareness is a good way to begin resolving or attending to the problem. There is a popular mantra used by many recycling advocates, "Reduce, Reuse, and Recycle." This slogan has widely been promoted with plastics and glass, but its message is also applicable to the disposal of e-waste. Many electronic stores offer services to help customers bring in old electronics or parts so as to dispose of them safely and properly.

“Mix them and you get garbage;
Separate them and you get resources”
……Japanese saying

**Pollution is nothing but the resources we are not harvesting. We allow them to disperse because we’ve been ignorant of their value. - R. Buckminster Fuller**

***

## 7. ನೀನಾರಿಗಾದೆಯೋ ಎಲೆ ಮಾನವ?

– ರಾಘವೇಂದ್ರ ಹೇರ್ಳೆ, ಜಿ.

ಅಂದಿನಿಂದಿನ ತನಕ ನಿನಗೆ ನಾ ಒಡನಾಡಿಯಾಗಿರುವೆ,
ನಿನ್ನ ನೆತ್ತಿಯ ಮೇಲೆ ಹಸಿರ ಚಾದರವ ನಾ ಹೊದೆಸಿರುವೆ,
ಹೂ, ಹಣ್ಣು, ಕಾಯಿಗಳ ನಿನ್ನುಡಿಗೆ ಮೊಗೆಮೊಗೆದು ತುಂಬಿಸಿರುವೆ,
ನಿತ್ಯ ಸೌರಭದ ಸವಿಗಾಳಿಯ ಅನುಕ್ಷಣವೂ ಸೇವಿಸಲು ಕೊಡುತಿರುವೆ,
ನಿನ್ನ ದಾಹವ ನೀಗಲು ಅಮೃತಜಲವ ಬೊಗಸೆಗೊಡ್ಡಿರುವೆ,
ಹಸಿವಿಗನ್ನವನಿಕ್ಕಲು ಹಸನು ಮಾಡಿದ ಫಲವತ್ತಾದ ಮಣ್ಣನಿತ್ತಿರುವೆ,
ಹೇಳು, ನೀನಾರಿಗಾದೆಯೋ ಎಲೆ ಮಾನವ?



ಸತ್ಯಂ ಶಿವಂ ಸುಂದರಂ ಎಂಬ ರಸವಾಕ್ಯವ ನಿನ್ನ ಕಿವಿಯಲ್ಲುಸುರಿದೆ,
ನಿನ್ನ ಕಲ್ಪನೆಯ ರೆಕ್ಕೆ ಬಿಚ್ಚಿಸಿ ಸೃಷ್ಟಿಶೀಲತೆಯ ಕಾಯಕಕ್ಕೆ ಹಚ್ಚಿದೆ,
ಹೊತ್ತಿಗೊತ್ತಿಗೆ ನೆರಳನೀಯುತ, ಒಲವಿನಾಸರೆಯಾಗುತ,
ಮಡಿಲ ತೊಟ್ಟಿಲಲ್ಲಿ ಮಲಗಿಸಿ ತಾಯಿಯಂತೆ ತೂಗಿದೆ,
ನಿನ್ನ ಆರೋಗ್ಯದ ಕಾಳಜಿಗಾಗಿ,
ಗಂಧದ ಕೊರಡಿನಂತೆ ನನ್ನನೇ ನಾ ತೇಯ್ದು,
ತನುಮನದಲೆಲ್ಲಾ ಶಾಂತಿ, ಪ್ರಫುಲ್ಲತೆಯ ತುಂಬಿ,
ನಿರಮ್ಮಳದ ಬದುಕಿಗೆ ಮುನ್ನುಡಿಯಾದೆ,
ಹೇಳು, ನೀನಾರಿಗಾದೆಯೋ ಎಲೆ ಮಾನವ ?

ಭಾಷಣದ ದೇಶಾವರಿ ನಗೆಯಿಲ್ಲ, ಘೋಷಣೆಯ ಕೃತಕತೆಯಿಲ್ಲ,
ಚರ್ಚೆ ಎಂಬ ಪೆಡಂಭೂತದ ಸೋಂಕು ಇಲ್ಲವೇ ಇಲ್ಲ,
ಲೇಖನದ ಹಾರ–ತುರಾಯಿಗಳಿಲ್ಲ ; ಸತ್ಯಾಗ್ರಹ, ದೊಂಬಿ, ಮುಷ್ಕರಗಳ ಬೆದರಿಕೆಗಳಿಲ್ಲ,
ಆಸೆಬುರಕನ ವಿಕೃತಿಯಿಲ್ಲ ; ಬುದ್ಧಿಜೀವಿಯ ಸೋಗಲಾಡಿತನವಿಲ್ಲ,
ಜನನಾಯಕರ– ಜನಸೇವಕರ ಲೆಕ್ಕಾಚಾರಗಳಿಲ್ಲ,
ಸ್ವಾರ್ಥವಿಲ್ಲದೆ, ಅರ್ಥದ ಹಂಗು ತೊರೆದು,
ಶ್ರುತಿಸಹ್ಯವಾದ ಭಾವಗೀತದಂತೆ
ಹರಿಯುತಿರುವೆ ಸತತವಾಗಿ, ನಿನ್ನೆದೆಗೆ ಸಿಂಚನವಾಗಿ
ಗುಪ್ತಗಾಮಿನಿಯಂತೆ,
ಹೇಳು, ನೀನಾರಿಗಾದೆಯೋ ಎಲೆ ಮಾನವ ?

ನೆರಳು ಕೊಟ್ಟ ನನಗೆ ನೀ ಕೊಡಲಿಯಾದೆ,
ಹೊಟ್ಟೆ ತುಂಬಿಸಿ, ಹರಸಿದ ನನಗೆ ನೀ ವಿಷವ ಕಕ್ಕಿದೆ,
ನಿನ್ನ ವ್ಯಷ್ಟಿ ಹಿತಕಾಗಿ ಸಮಷ್ಟಿ ಹಿತವ ನೀ ಬಲಿಕೊಟ್ಟೆ,
ಆಧುನೀಕರಣ, ಜಾಗತೀಕರಣ, ನಗರೀಕರಣಗಳೆಂಬ
ಕಬಂಧಬಾಹುಗಳಲಿ ನನ್ನ ನೀ ಪಳಗಿಸಿ ಹೆಡೆಮುರಿಯ ಕಟ್ಟಿದೆ,
ಹೂವಿನಂಥ ನನ್ನ ಹೃದಯಕೆ ಕಲ್ಲು ಹೊಡೆದುನೀಘಾಸಿಗೊಳಿಸಿದೆ,
ರಕ್ತಕಣ್ಣೀರ ಮಡುವಿನಲಿ ಬಿದ್ದು ನಾ ವಿಲವಿಲನೆ ಹಲುಬುವಾಗ,
ಕ್ರೂರ ಮೃಗದಂತೆ ಎರಗಿ ಭೀಭತ್ಸಲೋಕದ ದಾರುಣತೆ ತೋರಿದೆ,
ಈಗಂತೂ ಬಳಲಿ ಬಳಲಿ ನಾ ಬೆಂಗಾಡಾಗಿರುವೆ; ಬಂಜರಾಗಿರುವೆ,
ಆದರೆ ನೀ ಮಾತ್ರ ರೋಷಾವೇಶದಲಿ ನನ್ನೆಡೆಗೆ ಕತ್ತಿ ಮಸೆಯುತ್ತಲೇ ಇರುವೆ !!!

ಸಿಂಹಸ್ವಪ್ನದಂತೆ ಅಡಿಗಡಿಗೆ ನಕ್ಷತ್ರಿಕನಂತೆ ಕಾಡಿ ನಾಮಾವಶೇಷಗೈಯುತಿರುವೆ !!!
ಹೇಳು, ನೀನಾರಿಗಾದೆಯೋ ಎಲೆ ಮಾನವ ??

## 8. ಅಮ್ಮಾ ಶಾಲೆ ಯಾವಾಗ ಆರಂಭ ಆಗತ್ತೆ..........?

**–ಸುಜಾತ ಕೊಪ್ಪಲ್‌ಕಾಡ್**

ಅಮ್ಮಾ ಇವತ್ತೇ ಶಾಲೆ ಶುರು ಅಲ್ವಾ......! ಎಂದು ಕೇಳುತ್ತಲೇ ಹಾಸಿಗೆಯಿಂದ ಮೇಲೇಳುತ್ತಿದ್ದೆ. ರಜೆ ಮುಗಿಯುವುದಕ್ಕೆ ಮೊದೇ ಶಾಲೆ ಯಾವಾಗಲೊಮ್ಮೆ ಆರಂಭವಾಗುತ್ತದೋ ಎಂಬ ಕಾತರ ತಡೆದುಕೊಳ್ಳಲಿಕ್ಕೆ ಸಾಧ್ಯವಿರಲಿಲ್ಲ.
ಬೇಸಗೆಯ ಎರಡು ತಿಂಗಳ ರಜೆಯನ್ನು ಮಜಾವಾಗಿ ಕಳೆದ ನಂತರ ಶಾಲೆ ಶುರುವಾಯಿತೆಂದರೆ ಎಲ್ಲಾ ಮಕ್ಕಳಿಗೆ ಅದು ನೋವಿನ ವಿಷಯವಾಗುತ್ತಿತ್ತು. ಆದರೆ ನಮಗೆ ಮಾತ್ರ ಅದೊಂದು ಖುಷಿಯ ವಿಚಾರವಾಗಿತ್ತು. ಅದಕ್ಕೆಲ್ಲಾ ಕಾರಣ ನಮ್ಮ ಮೆಚ್ಚಿನ ಶಿಕ್ಷಕರು. ನಮ್ಮ ಶಿಕ್ಷಕರು ನಮ್ಮ ಪೋಷಕರಿಗೆ ಒಂದು ಕಿವಿ ಮಾತು ಹೇಳಿದ್ದರು. ಅದರಂತೆ ನಮ್ಮ ಪೋಷಕರು ನಡೆದುಕೊಳ್ಳುತ್ತಿದ್ದರು. ಅದಕ್ಕೆ ನಮಗೆಲ್ಲಾ ಮೇ ತಿಂಗಳ ಕೊನೆಯ ವಾರ ಮುಗಿಯುತ್ತಿದ್ದಂತೆ ಶಾಲೆ ಯಾವಾಗೊಮ್ಮೆ ಆರಂಭವಾಗುತ್ತದೋ ಎಂಬ ಕಾತರ ಇರುತ್ತಿತ್ತು.
ಎರಡು ತಿಂಗಳ ರಜೆಯಲ್ಲಿ ಅಜ್ಜಿ ಮನೆ, ಅತ್ತೆ ಮನೆ ಅಂತ ಎಲ್ಲಾ ಕಡೆಗೂ ಹೋಗಿ ಆಟವಾಡಿ, ಗೆಳೆಯರ ಜೊತೆಗೆ ಸೇರಿ ಕಿಲಾಡಿತನ ಮಾಡಿ ಮನೆಯವರಿಂದ ಬೈಗಳು ತಿಂದು, ನೆರೆಮನೆಯವರಿಂದ ಉಗಿಸಿಕೊಂಡು, ಅಂತೂ ನಮ್ಮ ಕಿತಾಪತಿಗಳಿಗೆ ಮಾತ್ರ ಸ್ವಲ್ಪವೂ ಲೋಪ ಆಗದಂತೆ ಕಿಲಾಡಿತನ ಮಾಡುತ್ತಿದ್ದೆವು. ಮೇ ತಿಂಗಳು ಮುಗಿಯುತ್ತಿದ್ದಂತೆ ಮತ್ತೆ ಶಾಲೆಗೆ ಹೋಗಬೇಕಲ್ಲಾ ಎಂಬ ಚಿಂತೆ ನಮಗೂ ಇರುತ್ತಿತ್ತು. ಶಾಲೆಗೆ ಹೋದ ನಂತರ ಮೊದಲ ಒಂದು ವಾರ ಸಪ್ಪಗೆ ಕುಳಿತುಕೊಂಡು ಗತಕಾಲದ (ಎರಡು ತಿಂಗಳ ರಜೆಯಲ್ಲಿ ಕಳೆದ ಕ್ಷಣಗಳನ್ನು) ಅಮೂಲ್ಯ ಕ್ಷಣಗಳನ್ನು ನೆನೆದುಕೊಂಡು ನಿಟ್ಟುಸಿರು ಬಿಡುತ್ತಿದ್ದೆವು.



ಇದನ್ನು ಕಂಡ ನಮ್ಮ ನೆಚ್ಚಿನ ಶಿಕ್ಷಕರು ಇದಕ್ಕೊಂದು ಉಪಾಯ ಕಂಡುಹಿಡಿದು ನಮ್ಮ ಪೋಷಕರಿಗೆ ತಿಳಿಸಿದ್ದರು. ಅದರಂತೆ ನಮ್ಮ ಪೋಷಕರು ಇನ್ನೇನು ಶಾಲೆ ಆರಂಭವಾಗಲು ಒಂದು ವಾರ ಇದೆ ಅನ್ನುವಾಗಲೆಲ್ಲಾ ನಮಗೆ ಹೊಸ ತರಗತಿಗೆ ಬೇಕಾದಂತಹ ಪುಸ್ತಕಗಳು, ಹೊಸ ಪಾಠಚೀಲ, ಪಾದರಕ್ಷೆ, ಸಮವಸ್ತ್ರ ಎಲ್ಲವನ್ನು ಕೊಡಿಸುತ್ತಿದ್ದರು. ಹೊಸ ಪುಸ್ತಕಗಳನ್ನು ನೊಡುತ್ತಲೇ ನಮ್ಮ ಕಣ್ಣ ಮುಂದೆ ಆ ಪುಸ್ತಕವನ್ನು ನನ್ನ ಗೆಳೆಯ ಗೆಳತಿಯರಿಗೆ ಯಾವಾಗ ತೋರಿಸುತ್ತೇನೋ? ಆ ಪುಸ್ತಕದಲ್ಲಿ ನಾನು ಯಾವಾಗ ಬರೆಯಲು ಆರಂಭಿಸುತ್ತೇನೋ? ಎಂಬ ಕಾತರ ಶುರುವಾಗುತ್ತದೆ. ಅದಲ್ಲದೆ, ಹೊಸ ಪುಸ್ತಕಗಳಿಗೆ ಬೈಂಡ್ ಮಾಡುವಂತಹ ಸಂಭ್ರಮ, ಬೈಂಡ್ ಹಾಕಿ ಅದರ ಮೇಲೆ ಲೇಬಲ್ ಅಂಟಿಸಿ ಅದರಲ್ಲಿ ನಮ್ಮ ಹೆಸರು, ತರಗತಿ ಹೆಸರು ಮತ್ತು ವಿಷಯದ ಹೆಸರು ಬರೆದು ಆ ಪುಸ್ತಕವನ್ನು ಕೈಯಲ್ಲಿ ಹಿಡಿದುಕೊಂಡರೆ ಮೈಯಲ್ಲೆಲ್ಲಾ ವಿದ್ಯುತ್ ಸಂಚಾರವಾದಂತೆ ಇರುತ್ತಿತ್ತು. ಇನ್ನು ಆ ಪುಸ್ತಕದಲ್ಲಿ ಬರೆಯಲು ಆರಂಭ ಮಾಡದೆ ಇದ್ದರೆ ನಮ್ಮ ಜೀವಕ್ಕೆ ಸುಖವಿರುತ್ತಿರಲಿಲ್ಲ. ಅದಕ್ಕಾಗಿ ಶಾಲೆ ಯಾವಾಗ ಶುರುವಾಗುತ್ತದೆ ಎಂಬುದನ್ನು ಕಾಯುತ್ತಾ ಕುಳಿತಿರುತ್ತಿದ್ದೆವು. ಆ ಕೊನೆ ವಾರ ಮಾತ್ರ ನಮ್ಮ ಮನಸ್ಸು ಯಾವುದೇ ಆಟಪಾಠದಲ್ಲಿ ತೊಡಗುತ್ತಿರಲಿಲ್ಲ. ಕಣ್ಣ ಮುಂದೆ ನಮ್ಮ ಅದೇ ಪ್ರೀತಿಯ ಶಿಕ್ಷಕಿ ಪಾಠ ಮಾಡುವ, ಕಥೆ ಹೇಳುವ ದೃಶ್ಯವೇ ಬರುತ್ತಿತ್ತು. ಹಾಗಾಗಿ ಶಾಲೆ ಆರಂಭವಾಗುವುದನ್ನೇ ಕಾಯುತ್ತಿದ್ದೆವು.ಶಾಲೆ ಆರಂಭವಾಗುವ ದಿನ ಬೆಳಗ್ಗೆ ಬೇಗ ಎದ್ದು, ಹಲ್ಲುಜ್ಜಿ, ಸ್ನಾನ ಮಾಡಿ, ದೇವರಿಗೆ ಕೈಮುಗಿದು, ದೋಸೆ ತಿಂದು, ಚಹ ಕುಡಿದು ಪಾಠಚೀಲವನ್ನು ಹೆಗಲಿಗೇರಿಸಿ, ಹೊಸ ಚಪ್ಪಲ್ ಧರಿಸಿ ಶಾಲೆಗೆ ಹೋಗುವ ನಮ್ಮ ಠೀವಿಯನ್ನು ನೋಡಲು ನಮ್ಮ ಅಮ್ಮಂದಿರಿಗೆ ಎರಡು ಕಣ್ಣು ಸಾಲುತ್ತಿರಲಿಲ್ಲ. ಎಷ್ಟೋ ಸಲ ಅವರ ಕಣ್ಣಂಚು ನವೆಯಾದದ್ದು ಕಂಡಿದ್ದೆವು. ಹೀಗೆ ಠೀವಿಯಿಂದ ಶಾಲೆಗೆ ಬಂದ ನಮ್ಮನ್ನು ನಮ್ಮ ಶಿಕ್ಷಕರು ಅಷ್ಟೇ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ನಾವು ತಂದಂತಹ ಹೊಸ ಪಾಠಚೀಲ, ಪುಸ್ತಕ, ಸಮವಸ್ತ್ರ, ಪಾದರಕ್ಷೆಗಳನ್ನು ನೋಡುವುದು, ಮೆಚ್ಚುಗೆ ವ್ಯಕ್ತಪಡಿಸುವುದು ಮಾಡುತ್ತಿದ್ದರು. ರಜೆಯನ್ನು ಹೇಗೆ ಕಳೆದಿರಿ ಮಕ್ಕಳೇ ಎಂದು ಕೇಳುತ್ತಾ, ನಾವು ಹುಬ್ಬೇರಿಸಿಕೊಂಡು, ಕಣ್ಣಗಲಿಸಿಕೊಂಡು ಹೇಳುತ್ತಿದ್ದ ಕಥೆಗಳನ್ನಂತೂ ಅವರೂ ಅಷ್ಟೇ ರೋಮಾಂಚನದಿಂದ ಕೇಳಿಸಿಕೊಳ್ಳುತ್ತಿದ್ದರು. ಅವರ ಜೊತೆಗೆ ನಾವು ರಜೆಯಲ್ಲಿ ಮಾಡಿದ್ದ ಎಲ್ಲಾ ಕಿತಾಪತಿಗಳನ್ನು ಹಂಚಿಕೊಳ್ಳುತ್ತಿದ್ದೆವು. ಹಂಚಿಕೊಳ್ಳುವಾಗ ಮಾತ್ರ ನಮಗೆ ಯಾವುದೇ ಭಯ ಇರುತ್ತಿರಲಿಲ್ಲ. ನಂತರದ ಒಂದೆರಡು ದಿನಗಳಲ್ಲಿ ತರಗತಿಕೋಣೆಯನ್ನು ಸ್ವಚ್ಛಗೊಳಿಸುವುದು, ಗಿಡಗಳಿಗೆ ನೀರು ಹಾಕುವುದು, ಶಾಲಾ ಆವರಣವನ್ನು ಸ್ವಚ್ಛಗೊಳಿಸುವುದು ಇವೇ ಮುಂತಾದ ಕೆಲಸಗಳಲ್ಲಿ ನಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಮಧ್ಯಾಹ್ನದ ಅವಧಿಯಲ್ಲಿ ಕಥೆ ಹೇಳುವುದು, ಹಾಡು ಹಾಡಿಸುವುದು ಮಾಡುತ್ತಿದ್ದರು.

ಈ ಪ್ರಕ್ರಿಯೆಗಳು ತರಗತಿಕೋಣೆಯಲ್ಲಿ ನಡೆಯುತ್ತಿರಲಿಲ್ಲ. ನಮ್ಮ ಶಾಲೆಯ ಆವರಣ ಬಹಳ ವಿಶಾಲವಾಗಿದ್ದು ಅದರಲ್ಲಿ ನಾಲ್ಕು ಮಾವಿನ ಮರಗಳು ಮತ್ತು ಎರಡು ಆಲದ ಮರಗಳಿದ್ದವು. ಪ್ರತಿಯೊಂದು ಮರಕ್ಕೂ ವಿಶಾಲವಾದ ಕಟ್ಟೆಯನ್ನು ಕಟ್ಟಲಾಗಿತ್ತು. ಒಂದೊಂದು ಮರದ ಬುಡದಲ್ಲಿ ಮೂರು ತರಗತಿಗಳನ್ನು ಒಂದೊಂದು ಭಾಗದಲ್ಲಿ ನಡೆಸಬಹುದಿತ್ತು. ಮರದ ಕೆಳಗೆ ನೆರಳಿತ್ತು. ಹಾಗಾಗಿ ನಮ್ಮ ಹೆಚ್ಚಿನ ಪಾಠಗಳು ಅಲ್ಲಿಯೇ ನಡೆಯುತ್ತಿದ್ದವು. ಶಾಲೆಯ ಆರಂಭದ ಒಂದೆರಡು ದಿನಗಳು ನಾವು ಅಲ್ಲಿಯೇ ಇರುತ್ತಿದ್ದೆವು. ಮೂರು ದಿನ ಕಳೆದ ನಂತರ ಶಾಲೆ ಹಳೆಯದಾಗಿ ಕಾಣುತ್ತಿತ್ತು. ಅಷ್ಟು ಹೊತ್ತಿಗೆ ನಾವು ಸಂಪೂರ್ಣವಾಗಿ ಶಾಲೆಯ ಪ್ರಕ್ರಿಯೆಗಳಿಗೆ ಒಗ್ಗಿ ಹೋಗುತ್ತಿದ್ದೆವು. ಹಾಗಾಗಿ ನಮಗೆ ಶಾಲೆಗೆ ಬರುವುದು ಹೊರೆ ಅಂತ ಅನಿಸುತ್ತಿರಲಿಲ್ಲ.

ರಜೆಯ ಮಜಾವನ್ನು ಅನುಭವಿಸುತ್ತಿದ್ದ ನಮ್ಮ ಮನಸ್ಸುಗಳಿಗೆ ಶಾಲಾರಂಭ ಶಾಪವಾಗಬಾರದು ಎಂಬ ಕಾರಣದಿಂದ ನಮ್ಮ ಶಿಕ್ಷಕರು ಇಂತಹ ಅನೇಕ ಪ್ರಯೋಗಗಳನ್ನು ಮಾಡುತ್ತಿದ್ದರು. ಶಾಲಾ ಚಟುವಟಿಕೆಗಳಲ್ಲಿ ನಮ್ಮನ್ನು ಆತ್ಮೀಯವಾಗಿ ತೊಡಗಿಸಿಕೊಳ್ಳುತ್ತಿದ್ದ ನಮ್ಮ ಶಿಕ್ಷಕರು ಯಾವತ್ತೂ ನಮಗೆ ಶಾಲೆ ಎಂದರೆ ಶಿಕ್ಷೆ ಎಂಬ ಭಾವನೆ ಬರುವಂತೆ ಮಾಡಿರಲಿಲ್ಲ. ಅಂತಹ ಶಾಲೆ ಮತ್ತು ಶಿಕ್ಷಕರಿಂದ ವಿದ್ಯೆ ಪಡೆದ ನಾನೇ ಧನ್ಯ. ಅಂತಹ ನನ್ನ ಆದರ್ಶ ಶಿಕ್ಷಕರಿಗೆ ಕೋಟಿಕೋಟಿ ನಮನ.

***

## 9. ಪಾಠ ಹೇಳೋ ಪ್ರಕೃತಿ

–ಸುದರ್ಶನ

ಎಷ್ಟು ದೂರ ನೋಡುದ್ರೂ ಬಯಲು ಹಾಗೆ ಸಾಗುತ್ತಿದ್ದರೆ ಅಲ್ಲಲ್ಲಿ ಗುಡ್ಡ ಅದೂ ಎಂಥದ್ದು? ಕಲ್ಲುಬಂಡೆಗಳಿದ್ದು, ಅದ್ರು ಜೊತೆ ಜಾಲಿ ಮುಳ್ಳಿನ ಗಿಡಗಳು, ಹೆಚ್ಚಾಗ್ ಕಾಣೋ ಬೇವಿನಮರ, ಬಸ್‌ನಲ್ಲಿ ಹೋಗತಾ, ಹೊರಗಿನ ಪರಿಸರ ನೋಡುತಾ ಜರ್ನಿ ಮಾಡೋ ನನಗೆ ಈ ಪಯಣ ಹೊಸದಾಗಿತ್ತು. ಗುಡ್ಡಗಳ ಹತ್ತಿರ ಬಸ್ಸು ಹೋಗುತ್ತಿದ್ದ ಹಾಗೆ ಮೊಬೈಲ್‌ಲಿ ಫೋಟೊ ತೆಗೆಯೋಕೆ ಶುರು ಮಾಡ್ಕೋಂಡಿದ್ದೆ. ಅಲ್ಲೂ ನನಗೇ ಕೋಟೆಗಳು ಕಂಡಾಗ ಇನ್ನೂ ಕುತೂಹಲ ಆಗ್ತ್ತಿತ್ತು. ಒಂದು ಕ್ಷಣ ಚನ್ನಾಗಿದೆ ಅನ್ನಿಸುತಿತ್ತು ಮರು ಕ್ಷಣದಲ್ಲಿ ಯಾಕೋ ಬೇಜಾರಾಗೋಕೆ ಶುರುವಾಯಿತು ಯಾಕೆ ಅಂತಿರಾ? ಅಲ್ಲಿದೆ ವಿಷಯ.



ನಾನು ಮಲೆನಾಡಿನ ಪರಿಸರದಲ್ಲಿ ಬೆಳೆದವನು, ನಮ್ ಶಿವಮೊಗ್ಗ ನಗರದಲ್ಲಿ ಮಲೆನಾಡಿನ ವಾತಾವರಣ ಇಲ್ಲದಿದ್ದರೂ ನೀವ್ ನಗರವನ್ನು ಬಿಟ್ಟು ಹೋರಟರೇ ಎಲ್ಲಾಕಡೆ ನಿಮಗೆ ಹಸಿರುನೆಲ, ಹೆಚ್ಚು ಮರಗಿಡಗಳು ಕಾಣತ್ತೆ. ಅದರಲ್ಲೂ ತೀರ್ಥಹಳ್ಳಿ, ಹೊಸನಗರ ಕಡೆ ಪಯಣ ಬೆಳೆಸಿದರಂತೂ ನಿಮಗೆ ಬರೀ ಗಿಡಮರಗಳೇ ಕಾಣುತ್ತದೆ. ಹಾಗೆ ಆ ಪರಿಸರನಾ ನೋಡುತಾ ಜರ್ನಿಮಾಡೋ ಮಜಾನೇ ಬೇರೆ, ಅದರಲ್ಲೂ ಮಳೆಗಾಲದಲ್ಲಿ ನಿಮಗೆ ಜಿನುಗೋ ಮಳೆ, ಮುಸುಕಿರೋ ಇಬ್ಬನಿ, ಬಸ್ ಚಾಲಕರಿಗೆ ದಾರಿಕಾಣದ ಹಾಗೆ ಮಾಡೋ ಮಂಜಿನ ಗಾಳಿ, ಎಲ್ಲೆಲ್ಲೂ ಹಸಿರು ತುಂಬಿದ ದಟ್ಟಕಾಡು, ಬೆಟ್ಟಗುಡ್ಡಗಳ ಸಾಲು, ಎತ್ತರವಾಗಿ ಬೆಳೆದಿರೋ ಮರಗಳು., ಅಬ್ಬಾ... ಆ ವಾತಾವರಣದ ಭಾವನೆಯೇ ಬೇರೆ ಬಿಡಿ.ಮಲೆನಾಡಿನ ಹೆಬ್ಬಾಗಿಲಿನಿಂದ ಬಯಲುಸೀಮೆ ಕಡೆ ಬಂದ ನನಗೆ ಈ ಪಯಣ ಬೇಜಾರ್ ಮಾಡೋಕೆ ಕಾರಣ ಏನೂ ಅಂತ ನಿಮಗೆ ಈಗ ಗೊತ್ತಾಗಿರಬಹುದು ಅನ್ಕೋತೀನಿ. ಜೀವಶಾಸ್ತ್ರದ ವಿದ್ಯಾರ್ಥಿಯಾದ ನನಗೆ ಈ ಬೇರೆ ಬೇರೆ ರೀತಿಯ ಪ್ರದೇಶಗಳನ್ನ ಹೋಲಿಸಿ ಅದರಲ್ಲಿರುವ ವ್ಯತ್ಯಾಸಗಳನ್ನಾ, ವಾತಾವರಣನಾ ಅದಕ್ಕೆ ಕಾರಣಗಳನ್ನ ತಿಳಿದುಕೊಳ್ಳೋ ಕುತುಹಲ,ಈ ಬಯಲುಸೀಮೆ ಕಡೆಯ ನದಿಗಳು, ಅವುಗಳ ನೀರಿನ ಮೂಲ, ಬಿಸಿಲು, ಒಣಹವೆ, ಕುರುಚಲು ಗಿಡಗಳು, ಕೆಲವೇ ವಿಧದ ಮರಗಳು, ಮಳೆಯ ಅಭಾವ, ತೇವಾಂಶ, ಸಸ್ಯವರ್ಗ,ಪ್ರಾಣಿವರ್ಗ ಹೀಗೆ ಎಲ್ಲದರ ಬಗ್ಗೆ ತಿಳಿದುಕೊಳ್ಳುತ್ತಾ ಇದ್ದೀನಿ. ಇಲ್ಲಿನ ಶಾಲೆಯಲ್ಲಿ ಮಕ್ಕಳಿಗೆ ಕಾಡಿನ ಕಲ್ಪನೆ ಕೇವಲ ಕಲ್ಲುಮುಳ್ಳುಗಳ ಗುಡ್ಡ,ಕುರುಚಲು ಗಿಡಗಳ ಪೊದೆ ಎಂಬುದಕ್ಕೆ ಸೀಮಿತವಾದುದನ್ನು ಕಂಡು ನನಗೆ ಬೇಸರವಾಯಿತು,ದಟ್ಟಕಾಡಿನ ಅಗಾಧತೆ, ಮೈನವಿರೇಳಿಸುವ ಪಕ್ಷಿ–ಪ್ರಾಣಿಗಳ ಕೂಗನ್ನು ಈ ಮಕ್ಕಳು ಕೇಳುವುದು ಎಂದಿಗೋ ತಿಳಿದಿಲ್ಲಾ.ಅದಕ್ಕೆ ಅನುಕೂಲಕರವಾದ ವಾತಾವರಣವೂ ಇಲ್ಲಿಲ್ಲ. ಆದರೆ ನನಗೆ ಇತ್ತೀಚಿನ ದಿನಗಳಲ್ಲಿ ಆಗುತ್ತಿರುವ ಬದಲಾವಣೆಗಳ ಬಗ್ಗೆ ಅಸಮಧಾನದ ಜೊತೆ ಆತಂಕವಿದೆ.

ಬಯಲುಸೀಮೆಯ ಈ ಪ್ರದೇಶದಲ್ಲಿ ಮಳೆಯ ಪ್ರಮಾಣ ಮೊದಲೇ ಕಡಿಮೆ. ಅದರಲ್ಲಿ ಕಳೆದ ವರ್ಷದ ಹಾಗೆ ಈ ಬಾರಿಯೂ ಮಳೆಯಾಗದಿದ್ದರೆ ಇಲ್ಲಿನ ಜೀವ ಸಂಕುಲದ ಕಥೆ ಏನು?, ನದಿ–ಕೆರೆಗಳಲ್ಲಿ ನೀರೇ ಕಾಣದಾಗಿ ಬರಡಾಗಿದೆ. ಬೇಸಿಗೆಯ ಉಷ್ಣಾಂಶ 42–45 ರ ವರೆಗೂ ತಲುಪುತ್ತಿದೆ. ನನಗೆ ಆತಂಕವಾದ ಇನ್ನೊಂದು ವಿಷಯವೆಂದರೆ ಈ ಬಾರಿ ಮಲೆನಾಡಿನಲ್ಲೂ 41 ಡಿಗ್ರಿ ಉಷ್ಣಾಂಶ ದಾಖಲಾಗಿದೆ. ಅಲ್ಲಿಯೂ ನದಿಗಳು

ಒಣಗುತ್ತಿದೆ. ಸ್ವಲ್ಪಮಟ್ಟಿನ ಕಾಡುಗಳಿರುವ ಕಾರಣ ಅಲ್ಲಿ ಸಂಜೆಯ ವೇಳೆಗೆ ತಂಪೆನಿಸುತ್ತಿದೆ ಬಿಟ್ಟರೇ ಅಲ್ಲಿಗೂ, ಇಲ್ಲಿಗೂ ಹೆಚ್ಚೇನು ವ್ಯತ್ಯಾಸವಿಲ್ಲ. ಮಳೆಗಾಗಿ ಕಾಯುತ್ತಿರುವ ಉನ್ನತಮಟ್ಟದ ಜೀವಿಗಳಾದ ನಮಗೇ ಹೀಗೆ ಕಷ್ಟವಾಗುತ್ತಿದ್ದರೇ, ಪ್ರಾಣಿ–ಪಕ್ಷಿಗಳ ಕಥೆ ಏನು. ಕಳೆದ ಬೇಸಿಗೆ ಅವುಗಳ ಪಾಲಿಗೆ ನರಕವೇ ಸರಿ.

ಈ ಬಯಲುಸೀಮೆಯಲ್ಲಿ ಕಲ್ಲುಬಂಡೆಗಳ ಗುಡ್ಡಗಳನ್ನೇ ಸ್ಫೋಟಿಸಿ, ಕ್ವಾರಿಗಳನ್ನು ನಿರ್ಮಿಸಿ ಅಲ್ಲಿ ಆ ರೀತಿಯ ಬೃಹತ್ ಬಂಡೆಗಳು ಇದ್ದವು ಎಂಬ ಕುರುಹೇ ಇಲ್ಲದಂತೆ ಮಾಡುತ್ತಿರುವ ಈ ಲೋಭಿ ಮಾನವ ಅಲ್ಲಿನ ಜೀವಜಂತುಗಳ,ಸಸ್ಯವರ್ಗದ ನಾಶಕ್ಕೆ, ವಾತಾವರಣದ ಮಾಲಿನ್ಯಕ್ಕೆ ನೇರಹೊಣೆಯಾಗಿದ್ದಾನೆ.ಗಣಿಗಾರಿಕೆಗೆ ತೋಡುತ್ತಿರುವ ಆ ಗುಂಡಿಗಳು ಅವನ ಸಮಾಧಿಗೆ ತೆರೆದ ಬಾಗಿಲುಗಳಾಗಿ ಬದಲಾದರೆ ಅದರಲ್ಲಿ ಆಶ್ಚರ್ಯವೇನಿಲ್ಲ.

ನಿಮಗೆ ಮಲೆನಾಡಿನ ಇನ್ನೊಂದು ಮುಖದ ಪರಿಚಯ ಮಾಡಿಸಲು ಬಯಸುತ್ತೇನೆ, ಏನೆಂದರೇ, ನೀವು ಹಳ್ಳಿಪ್ರದೇಶಗಳನ್ನು ದಾಟಿ ಕಾಡು ಪ್ರಾರಂಭವಾಗುವ ಜಾಗದಲ್ಲಿ ಕಾಡಿನ ಒಳ ಹೊಕ್ಕರೇ ನಿಮಗೆ ಸ್ವಲ್ಪ ದೂರ ಹೋಗುತ್ತಿದ್ದಂತೆಯೇ ಕಾಡು ಕೊನೆಗೊಂಡು ಬತ್ತದ ಗದ್ದೆಗಳು, ಅಡಕೆ–ಬಾಳೆ ತೋಟಗಳು ಕಾಣುತ್ತವೆ. ಬೆಟ್ಟಗುಡ್ಡಗಳ ಒಂದು ಬದಿ ಹಸಿರು ಕಾಡಿದ್ದರೆ ಇನ್ನೊಂದು ಬದಿ ಕಾಫಿ–ಟೀ ಎಸ್ಟೇಟ್‌ಗಳು ನಿಮ್ಮ ಕಣ್ಣಿಗೆ ಅಚ್ಚರಿಯನ್ನುಂಟು ಮಾಡಿಸುತ್ತವೆ. ಇದರ ಅರ್ಥವೇನೆಂದು ನಾನು ಬಿಡಿಸಿ ಹೇಳಬೇಕಿಲ್ಲ ಅನಿಸುತ್ತದೆ. ಕಾಡುಪ್ರಾಣಿಗಳು ನಾಡಿಗೆ ಬಂದು ತೊಂದರೆ ಕೊಡುತ್ತಿವೆ ಎಂದು ಬೊಬ್ಬೆಹೊಡೆಯುವ ಈ ಮನುಷ್ಯನೆಂಬೊ ಪ್ರಾಣಿ ಆ ಜಾಗ ಆ ವನ್ಯಜೀವಿಗಳದ್ದೂ ಎಂಬುದನ್ನು ಮರೆತ್ತಿದ್ದಾನೆ. ಇರುವ ಕಾಡನ್ನು ಕಡಿದು ಅದರ ಜಾಗವನ್ನು ಆಕ್ರಮಿಸುವ ಮಾನವನ ಬುದ್ದಿವಂತಿಕೆ ಅವನ ಅವನತಿಗೇ ನಾಂದಿ ಹಾಡುವ ಕಾಲ ದೂರವಿಲ್ಲ ಎಂದು ಪ್ರಕೃತಿ ನಿಧಾನವಾಗಿ ಸೂಚನೆ ನೀಡುತ್ತಿದೆ. ಅದು ಈ ವಾತಾವರಣದ ಬದಲಾವಣೆಗಳ ಮೂಲಕ. ಮನುಷ್ಯ ತನ್ನ ಮುಂದಿನ ಸಂತತಿಗೆ ಹಸಿರೆಂಬ ಅಮೃತವನ್ನು ಉಳಿಸುವನೋ, ಮಾಲಿನ್ಯವೆಂಬ ವಿಷವನ್ನು ನೀಡುವನೋ ಈಗಲೇ ಅರಿತು ಪಾಠಕಲಿಯಬೇಕು.

ತಾನು ಪಡೆದಿದ್ದನ್ನು ಹಿಂತಿರುಗಿ ಕೊಡುವ ಗುಣ ಪ್ರಕೃತಿಯದ್ದು, ಇದನ್ನು ಅರಿತು ಹಸಿರನ್ನು ಉಸಿರಾಗಿ ಮಾಡಿಕೊಳ್ಳುವ ಭಾವನೆ ಈ ಮಾನವನಿಗೆ ಉಸಿರು ಹೋಗುವ ಮುನ್ನವೇ ತಿಳಿದರೇ ಒಳ್ಳೆಯದು. ಇಲ್ಲದಿದ್ದರೇ........... Nature will be Teacher, Of course it's Best Teacher.

***

## 10. ಸ್ವಗತ

–ಸರಳ



ಹಣ್ಣೆಲೆ ಉದುರಿದಾಗ
ಹಸಿರೆಲೆ ನಕ್ಕಿತಂತೆ
ಹಸಿರೆಲೆ ಹಣ್ಣಾದಾಗ
ಅಂದು ನಕ್ಕಿದ್ದ ನೆನಸಿ ಅಂದಿತಂತೆ–2

ಪ್ರಕೃತಿಯ ನಿಯಮ ನಾನೇಕೆ ಮರೆತೆ
ಚಿಗುರು ಹಸಿರಾಗುವುದು
ಹಸಿರು ಹಣ್ಣಾಗುವುದು
ಕಾಲಚಕ್ರದ ಕ್ರಮ
ಇದ ಮರೆತ ನಾನು
ಅಂದು ನಕ್ಕಿದ್ದರೆ
ಇಂದು ಕಾಲ ಚಕ್ರದ ನಡೆಗೆ
ಹೊರತಲ್ಲ ನಾನು
ಬದುಕಲೇ ಬೇಕು
ಬದುಕಿ ಬಾಳಲೇ ಬೇಕು
ಹಸಿರಾಗಿ ಉಸಿರಾಗಿ
ಕೊನೆಗೊಂದು ದಿನ ಹಣ್ಣಾಗಿ
ಜಗದ ಹಸಿರ ನಡೆಗೆ
ದಾರಿ ತೋರಿ
ಪ್ರಕೃತಿ ನಿಯಮ ಪಾಲಿಸುತ
ಅನಂತದೆಡೆಗೆ

***

## 11. Go Green – A long way to go

-Peri



Can we go green? What does it mean to go green? Are we anywhere near the green? Will a bye-line ‘Go Green’ in our email signature in any way help? Difficult questions and the moment we try to genuinely answer these it hits back at us badly. It depresses us. Since we have come so far from the greenery that we do not see any light in the tunnel. There seems to be no path towards greenery and we do not see us reaching there in near future. We are in the grey patch. A patch which is pulling us down to further darkness, depression and death! Can we Go Green? Long way to go.

Why are we in this path? Nobody knows. Is there a way out? No. Not if we continue moving in this path. We will have to change our path. How do we change it? When the entire movement of the society is from village to city, all our aspirations are from small to big, our entire life style is from organic to synthetic, how do we change this? How do we halt this mad rush? We are used to this life style. This life style has to change but how do we change the life style? Can we change THIS life style? This life style of the present society? It seems to be very difficult. How can we change the society’s life style? No we cannot change society’s life style. But, we can change our life style, MY life style. Hence, the beginning has to be me. Have I began seriously doing something concrete on this? How sensitive I am in my daily living? What do I eat, what do I wear and how do I live? Long way to go.

Do I eat simple food close to the nature? Do I eat more raw food? Do I eat simple food? Non-processed, non-freeze, non-treated, non-preserved, and non-packed . . . Can I avoid all these things? Can I have food which is simple, cooked in a very simple way, cooked by me? How much do I waste? What do I do with the waste food? A long way to go. Water is another ingredient which this society has misused. How am I using water? Do I waste a lot of water? Do I reuse the used water and can I use it multiple times? Do I use bottled water? Can I use carry bottle to carry water for drinking? Have I put enough effort in conserving water? Do I throw away my used water or do I have some mechanism made for re- use of this water? Is my used water flowing in to a garden or plants? Is my tap water flowing continuously while I brush my teeth and wash my face? Is there a difference in using the water in my home and in office, hotel? Am I enough sensitive to my water usage? Long way to go.



What am I wearing? Is it organic? Is it hand-made? Is it home made? Is it degradable? Is it simple? Or is it branded and imported? This makes a huge difference. Just think of how the cloth is made. Does it use a lot of natural resources? Is it produced in some remote place (for cheap labor) and transported all over the world? Does this go well with this climate? With the used dress which is torn, do I stitch it and use or do I throw

away?  Do I give my older dress to some body in need?  How much dress do I have?  Do I continuously buy or buy only when I do not have anything to wear? Long way to go.

Is my house eco-friendly? Do I have materials in my house which is not used? Which is not used often? Which is just for show? Do I buy things when I see in any shop or do I buy when I need it at my home? Is my home filled with materials and furniture? Are my furniture simple and comfortable or showy and gorgeous? Do my house use electricity often or is my house well lit with solar and enough ventilation to avoid fan? Am I using Air Conditioner at home?  Is my house simple and ordinary, welcoming others or is it gated, humiliating to others?  Long way to go.

Go green is not a slogan. Go green is a life style, it is an ideology, it is a philosophy, and it is a belief. Not to be preached but to be lived. Lived by each one of us. For our own good. In my life I can see that I have started to think about it. I have tried to bring only a few things into my life but, I have a long way to go to GO GREEN.

***

## 12. ಭೂಮಿ ಹೋಮ.

**– ರಾಮಚಂದ್ರ ಭಟ್**



ಭೂಮಿ ಭಣಗುಟ್ಟುತ್ತಿದೆ
ಮಣ ಮಣನೆ ಅದೇನೋ ವಟಗುಟ್ಟುತ್ತಿದೆ
ಅಸ್ಪಷ್ಟವಾಗಿ,"ಬಗೆಬಗೆದು ಬರಿದಾಗಿಸದಿರಿ ನನ್ನನ್ನು.
ಸ್ವಾಮೀ... ಇನ್ನು ಸಾಕು, ನಾನು ಅಗೆದಷ್ಟೂ ಬರಿದು.
ನಿಮ್ಮಾಸೆಗೆ ತಕ್ಕಷ್ಟು ನನ್ನಲ್ಲುಂಟು
ಸುಮ್ಮನೆ ಅತಿಯಾದರೆ ಅದೂ ಇಲ್ಲ.
ಗಮ್ಮನೆ ಮಾತಿಲ್ಲದೆ ಕುಳಿತಿದ್ದೇನೆಂದು
ಸವಾರಿ ಹೆಚ್ಚಿಸಬೇಡಿ.

ಒಂದೊಮ್ಮೆ ನಡುಗಿದರೆ,
ಗುಡುಗಿದರೆ, ಮಾತು ಬಿಡಿ;
ಬಾಯಿ ಬಿಟ್ಟರೆ ಸಾಕು
ಆದೀತು ಕಿಲಾರಿ–ಲಾತೂರು;
ಮುಂದೊಮ್ಮೆ ನಿಮ್ಮ ಊರು.
ನನ್ನ ಹಸಿರೇ... ನಿಮ್ಮ ಉಸಿರು;
ಬರಿದಾಗಿಸದಿರಿ ನನ್ನ ಬಸಿರು."

***

## 13. ಹಸಿರು–ಉಸಿರು

**–ಭವ್ಯ**

ಭೂಮಿಯ ಮೇಲೆ ಮಾನವನು ಸೇರಿರುವಂತೆ ಇತರ ಎಲ್ಲಾ ಜೀವಿಗಳು ಬದುಕಲು ವಾಯು ಅಂದರೆ ನಾವು ನಮ್ಮ ಆಡು ಭಾಷೆಯಲ್ಲಿ ಕರಿಯುವ ಗಾಳಿ ಪ್ರಮುಖವಾದುದು. ಆದರೆ ಈ ಗಾಳಿ ಭೂಮಿಯ ಎಲ್ಲಾ ಸ್ಥಳದಲ್ಲೂ ಇದೆ ಹೌದಲ್ಲವೇ? ಆದರೆ ನಮ್ಮ ಉಸಿರಾಟಕ್ಕೆ ಬೇಕಿರುವುದು ಆಮ್ಲಜನಕ ಮಾತ್ರ. ಆದರೆ ಇಂದು ಜಗತ್ತಿನ ಪ್ರತೀಯೊಂದು ರಾಷ್ಟ್ರವೂ ಕೂಡ ಆರ್ಥಿಕವಾಗಿ ನಾವು ಪ್ರಬಲರಾಗಬೇಕು, ಆ ಮೂಲಕ ಇಡೀ ಜಗತ್ತನ್ನೇ ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳ ಬೇಕೆಂಬ ಹಪ–ಹಪಿಗೆ ಬಿದ್ದು ಕೈಗಾರಿಕೀಕರಣಕ್ಕೆ ಮುಗಿಬೀಳುತ್ತಿವೆ. ಇದಕ್ಕೆ ಸ್ಪಷ್ಟ ಉದಾಹರಣೆ ಎಂದರೆ ಇಂದು ನಮ್ಮ ದೇಶದ ಪ್ರಧಾನಮಂತ್ರಿ ಯಾಗಿರುವ ನರೇಂದ್ರ ಮೋದಿಜೀ ಯವರು "ಮೇಕ್ ಇನ್ ಇಂಡಿಯಾ" ಎಂಬುದಕ್ಕೆ ಕರೆನೀಡಿರುವುದು. ಮೇಲ್ನೋಟಕ್ಕೆ ನಮಗೆ ಈ ವಿಷಯವಾಗಿ ಯಾವುದೇ ತಗಾದೆ ಇರದೇ ಇರಬಹುದು. ಇದರಿಂದ ನಮ್ಮ ದೇಶದ ಆರ್ಥಿಕ ಸ್ಥಿತಿಯು ಸುಧಾರಿಸುತ್ತದೆ ಎಂಬುದು ಸತ್ಯ. ಆದರೆ ಇದೇ ಬರಾಟೆಯಲ್ಲಿ ನಾವು ಮುಂದುವರಿದರೆ ನಮ್ಮ ದೇಶದ ನೈಸರ್ಗಿಕ ಸಂಪತ್ತುಗಳು

ನಾಶವಾಗಿ ನಮ್ಮ ಮುಂದಿನ ಪೀಳಿಗೆಯು ಹಲವಾರು ಕಷ್ಟಗಳಿಗೆ ತುತ್ತಾಗಲು ನಾವೇ ಕಾರಣವಾಗ ಬಹುದು ಎಂಬಂತಹ ಸಣ್ಣ ಕಾಳಜಿ ಯಿಂದ ಮತ್ತು ಈ ನಿಸರ್ಗ ಮಾತೆಯನ್ನು ಉಳಿಸಿಕೊಳ್ಳ ಬೇಕೆಂಬ ಕಾರಣ ದಿಂದ ನಾನು ಈ ವಿಷಯವನ್ನು ಕುರಿತು ಬರೆಯುತ್ತಿದ್ದೇನೆ.

ಸುಮಾರು 1ವರ್ಷದ ಹಿಂದೆ ನಾನು ಕೆಲಸಕ್ಕೆಂದು ಮಂಡ್ಯಾಗೆ ಬಂದೆ. ಇಲ್ಲೇ ನಾನು ಉಳಿಯುವಂತಹ ಅನಿವಾರ್ಯತೆ ಇದ್ದದ್ದರಿಂದ ಸುಮಾರು 15ದಿನಗಳ ವರೆಗೆ ನಾನು ನನ್ನ ಹುಟ್ಟೂರಾದಂತಹ ಮೈಸೂರಿಗೆ ಹೋಗಲು ಸಾಧ್ಯವಾಗಿರಲಿಲ್ಲ. 15ದಿನಗಳ ನಂತರ ನಾನು ಮೈಸೂರಿಗೆ ಹೋದಾಗ ನನಗೆ ಒಂದು ಆಶ್ಚರ್ಯವೇ ಕಾದಿತ್ತು! ಅದೇನೆಂದರೆ ನಾನು ಓಡಾಡಿ, ಆಡಿ ಬೆಳೆದಂತಹ ಅಗ್ರಹಾರದ ರಾಮಾನುಜಚಾರ್ಯ ರಸ್ತೆಯಲ್ಲಿ ದಟ್ಟವಾಗಿ ಬೆಳೆದಿದ್ದಂತಹ ಎಲ್ಲಾ ಸಾಲುಮರಗಳೂ ಕೂಡ ಮಾಯವಾಗಿಹೋಗಿತ್ತು. ಒಂದು ಕ್ಷಣದಲ್ಲಿ ಇದು ನನ್ನ ಊರ? ಎಂಬ ಪ್ರಶ್ನೆ ನನ್ನ ಮನಸ್ಸಿನ ಪಟಲದಲ್ಲಿ ಆದುಹೋಗಿತ್ತು. ಹಾಗೇ ಇದರ ಕುರಿತೇ ಯೋಚಿಸುತ್ತಿರುವಾಗ ಒಮ್ಮೆಲೆ ಒಂದು ರೀತಿಯ ಭಯ ನನ್ನನ್ನು ಆವರಿಸಿಕೊಂಡಿತು. ಇದಕ್ಕೆ ಒಂದು ಬಲವಾದ ಕಾರಣ ಕೂಡ ಇತ್ತು. ಅದೇನೆಂದರೆ ನಾವು ಚಿಕ್ಕ ವಯಸ್ಸಿನಲ್ಲಿದ್ದಾಗ ನಮ್ಮ ಅಜ್ಜಿಯ ಮನೆಗೆ ಇದೇ ದಾರಿಯಲ್ಲಿ ಸುಮಾರು 4 ರಿಂದ 5 ಕಿಲೋ ಮೀಟರ್ ವರೆಗೆ ನಾವು ನಡೆದು ಹೋಗುತ್ತಿದ್ದೆವು. ಮಧ್ಯಾಹ್ನ ಎಷ್ಟೇ ಉರಿಬಿಸಿಲು ಇದ್ದರು ಈ ಮರಗಳು ಮಾತ್ರ ನಮಗೆ ನೆರಳು ಕೊಟ್ಟು ಬಿಸಿಲಿನ ಜಳ ನಮಗೆ ತಗಲದಂತೆ ಕಾಪಾಡುತ್ತಿತ್ತು.



ನನಗೆ ಈಗಲು ಒಂದೇ ಒಂದು ಪ್ರಶ್ನೆ ಯಾವಾಗಲೂ ಕಾಡುತ್ತಿರುತ್ತದೆ. ಅದೇನು ಗೊತ್ತಾ? ನಾವೆಲ್ಲ ಇಂದು "ಜಾಗತೀಕರಣ, ಆರ್ಥಿಕ ಪ್ರಗತಿ, ಕೈಗಾರಿಕೀಕರಣ, ಹಣ ಮಾಡಬೇಕು, ನಾವು ಶ್ರೀಮಂತರಾಗ ಬೇಕು" ಹೀಗೆ ಹಲವು ನಮ್ಮ ಬೇಕುಗಳ ಪಟ್ಟಿ ಬೆಳೆಯುತ್ತಲ್ಲೇ ಹೋಗುತ್ತಿರುತ್ತದೆ. ಹೀಗೆ ನಮಗೆ ಬೇಕಿದ್ದೆಲ್ಲ ಪಡೆದ ನಂತರ, ಸಾಧಿಸಿದ ನಂತರ ಆ ಹಣ ಶ್ರೀಮಂತಿಕೆಯನ್ನು ಗಳಿಸಿದ ನಂತರ ನಾವು ಹಸಿವಾದಾಗ ತಿನ್ನುವ ಆಹಾರ ಕೊಡುವ ಎಲ್ಲಾ ವನ್ಯಸಂಪತ್ತು ನಾಶವಾಗಿರುತ್ತೆ. ಆಗ ನಮ್ಮ ಹಸಿವನ್ನು ತಣಿಸುವ ಶಕ್ತಿ ಈ ಹಣ, ಸಂಪತ್ತಿನಿಂದ ಸಾಧ್ಯವಿದೆಯಾ? ಎಂದು. ಈ ಸಂದರ್ಭದಲ್ಲಿ ನನಗೆ ಒಂದು ಮಾತು ನೆನಪಿಗೆ ಬರುತ್ತಿದೆ. ಅದೇನೆಂದರೆ ಪುರಂದರದಾಸರು ಹೇಳುತ್ತಾರೆ ಎಲ್ಲಾರೂ ಮಾಡುವುದು ಹೊಟ್ಟೆಗಾಗಿ ಮತ್ತು ಗೇಣು ಬಟ್ಟೆಗಾಗಿ ಎಂದು". ನನ್ನ ಮನವನ್ನು ಈಗಲೂ ಕಾಡುವುದೇನೆಂದರೆ ನಮ್ಮ ಎಲ್ಲಾ ಬಯಕೆಗಳು ಈಡೇರಿ ನಮಗೆ ತಿನ್ನಲು ಏನೂ ಆಹಾರ ವಿಲ್ಲದಿದ್ದಾಗ, ನಾವು ಬದುಕಲು ಬೇಕಾದಂತಹ ಉತ್ತಮ ಪರಿಸರ

ಇಲ್ಲದಿದ್ದಾಗ ಮನುಷ್ಯನು ಸೇರಿ ಎಲ್ಲಾ ಜೀವಿಗಳು ಉಳಿಯಲು ಸಾಧ್ಯವಿದೆಯಾ? ಎಂದು. ಮನುಷ್ಯನ ಒಂದು ಸ್ವಾರ್ಥದಿಂದ ಈ ಒಂದಕ್ಕೊಂದು ಸರಪಳಿಯಂತೆ ಬೆಸೆದುಕೊಂಡಿರುವ ಪರಿಸರದ ವ್ಯವಸ್ಥೆಯನ್ನು ನಾಶಮಾಡುತ್ತಿರುವುದು ಉಳಿದ ಎಲ್ಲಾ ಜೀವಿಗಳ ಅಳಿವಿಗೆ ಕಾರಣವಾಗುತ್ತದೆ ಅಲ್ಲವೇ? ಇವತ್ತಿನ ಪರಿಸರದಿನದ ಆಚರಣೆಯ ಸಂದರ್ಭದಲ್ಲಿ ನಾನು ನಿಮ್ಮಲ್ಲಿ ಒಂದೇ ಒಂದು ವಿನಂತಿಯನ್ನು ಮಾಡಬೇಕೆಂದಿದ್ದೇನೆ. ಅದೇನೆಂದರೆ ಇಂದು ನಾವು ತೆಗೆದುಕೊಳ್ಳುವ ಮಾತ್ರೆಯ ರ್‍ಯಾಪರ್ ಗಳಿಂದ ಹಿಡಿದು ದೊಡ್ಡ ದೊಡ್ಡ ಕವರ್ ಗಳು, ಪ್ಲಾಸ್ಟಿಕ್ ವಸ್ತುಗಳ ವರೆಗೆ ಪ್ಲಾಸ್ಟಿಕ್ ನಮ್ಮನ್ನು ಆವರಿಸಿಕೊಂಡು ಬಿಟ್ಟಿದೆ. ದಯವಿಟ್ಟು ಈ ಪ್ಲಾಸ್ಟಿಕ್‌ಗಳ ಬಳಕೆಯನ್ನು ನಾವು ಕಡಿಮೆ ಮಾಡುವುದರ ಜೊತೆಗೆ ಅದರ ಪುನರ್–ಪುನರ್ ಬಳಕೆಯನ್ನು ಮಾಡೋಣ. ಈ ಪರಿಸರದ ಸೌಂದರ್ಯವನ್ನು ಕಾಪಾಡುತ್ತ ನಮ್ಮ ಮುಂದಿನ ಪೀಳಿಗೆಗೆ ಒಂದು ಉಡುಗೊರೆಯಾಗಿ ಪರಿಸರವನ್ನು ಕೊಡೋಣವೆಂದು. ಯಾವಾಗ ಈ ಹಸಿರನ್ನು ನಾವು ಉಳಿಸಿಕೊಳ್ಳುತ್ತೇವೆಯೋ ಅಲ್ಲಿಯ ವರೆಗೆ ನಮ್ಮ ಉಳಿವು ಸಾಧ್ಯವಾಗುತ್ತದೆ ಎಂಬುದನ್ನು ನಾವು ಮರೆಯದಿರೋಣ.

***

## 14. ಆ 2 ಮರಗಳ ನಾಪತ್ತೆ

– ಶ್ರೀಲತ ಕೆ ಎನ್.

ಎಂದಿನಂತೆ ಆ ದಿನ ಕಛೇರಿಯಿಂದ ಮನೆ ಸಮೀಪಿಸುತ್ತಿದ್ದಂತೆ ರಸ್ತೆಗಡ್ಡಲಾಗಿ ಮರ ಮುಟ್ಟುಗಳು, ರೆಂಬೆ ಕೊಂಬೆಗಳು ಹರಡಿದ್ದವು. ಲಾರಿಯೊಂದಕ್ಕೆ ದಿಮ್ಮಿಗಳನ್ನು ತುಂಬುವ ಕಾರ್ಯ ಸಾಗಿತ್ತು. ಮನೆಯ ಮುಂಭಾಗ ಬಟಾ ಬಯಲಾಗಿ ಮನೆ ರಸ್ತೆಗೆ ಸ್ಪಷ್ಟವಾಗಿ ಗೋಚರಿಸುತ್ತಿದೆ, ಮನೆಯ ಮುಂಭಾಗದಲ್ಲಿದ್ದ ಆ 2 ಮರಗಳು ಎಲ್ಲಿ ಎಂಬ ಪ್ರಶ್ನೆ ಮನದಲ್ಲಿ ಮೂಡುತ್ತಿದ್ದಂತೆ ರಸ್ತೆಯಲ್ಲಿ ಬಿದ್ದಿದ್ದ ಮರ ಮುಟ್ಟುಗಳು, ರೆಂಬೆ ಕೊಂಬೆಗಳು ನಡೆದ ಘಟನೆಗೆ ಸಾಕ್ಷಿಯಾಗಿದ್ದವು. ಮರಗಳು ನೆಲಕ್ಕುರುಳಿದ ಸತ್ಯವನ್ನು ಅರಗಿಸಿಕೊಳ್ಳಬೇಕಾಯಿತು. ಕಲಬುರಗಿಯಲ್ಲಿ ಬಾಡಿಗೆ ಮನೆ ಹುಡುಕುತ್ತಾ ಸಾಗಿದಾಗ ಮನೆಯ ಮುಂದಿದ್ದ ಆ 2 ಮರಗಳು ನನ್ನನ್ನು ಆಕರ್ಷಿಸಿದ್ದವು, ಅದೇ ಮನೆ ಬಾಡಿಗೆಗಿರಲಿ ಎಂದು ನಿರ್ಧರಿಸುವಾಗ

ಮರಗಳು ಮಾನದಂಡಗಳ ಪೈಕಿ ಒಂದಾಗಿತ್ತು. ಆದರೆ ಮರಗಳಿಲ್ಲದ ಆ ಮನೆ ಏಕೋ ಬೋಳು ಬೋಳಾಗಿ ಕಾಣುತ್ತಾ ಮನಸ್ಸು ಕೂಡಾ ಖಾಲಿ ಎನಿಸಿತು.

'ಯಾಕಮ್ಮಾ ಮರಕಡಿದರು'? ಎಂಬ ಮಗಳ ಪ್ರಶ್ನೆಯಲ್ಲಡಗಿದ್ದ ಕಳಕಳಿಗೆ 'ಅದು ಚಿಗುರುತ್ತೆ ಬಿಡು' ಎಂದು ಉತ್ತರಿಸಿದ್ದೆ. ಚಿಗುರುಗಳು ಮೂಡಬಹುದೆಂಬ ಆಸೆಯಿಂದ ಮರದ ಬೊಡ್ಡೆಗಳತ್ತ ದೃಷ್ಟಿಬೀರಿದ್ದೆ. ಆದರೀಗ 1 ವರ್ಷವಾಯಿತು ಬೊಡ್ಡೆಯಿಂದ ಚಿಗುರುಗಳು ಏಳಲೇ ಇಲ್ಲ.



ಮನೆಯೊಡತಿಯನ್ನುದ್ದೇಶಿಸಿ ಆ ದಿನ ಪ್ರಶ್ನಿಸಿದ್ದೆ, ಮರಗಳನ್ನು ಏಕೆ ಕಡಿಸಿದಿರಿ? ಪಕ್ಕದ ಕಾಂಪೌಂಡ್ ನಲ್ಲಿರುವವರು ಯಾವಾಗಲೂ ಕಂಪ್ಲೇಂಟ್ ಹೇಳುತ್ತಿರುತ್ತಾರೆ. ಮರಗಳ ಎಲೆಗಳು ಉದುರುತ್ತಿರುತ್ತವೆ, ಕಾಯಿ ಬಿಟ್ಟಾಗ ಅವು ಅವರ ಕಾಂಪೌಂಡ್‌ನೊಳಗೆ ಬಿದ್ದು ಗಲೀಜಾಗುತ್ತವೆ. ಯಾವಾಗಲೂ ಕಸ ಗುಡಿಸುತ್ತಿರಬೇಕು, ಕಡಿಸಿ ಹಾಕಿ ಎನ್ನುತ್ತಲೇ ಇದ್ದರು. ಅದಕ್ಕೆ ತೆಗಿಸಿ ಬಿಟ್ವಿ ಎಂದಿದ್ದರು. ನನಗೆ ಮಾತುಗಳು ಹೊರಳಲಿಲ್ಲ. ಹೀಗೂ ಆಲೋಚನೆ ಮಾಡಬಹುದೇ, ಮರಗಳಿಂದಾಗುವ ಉಪಯೋಗಗಳ ಬಗ್ಗೆ ನಾವು ಕೇಳಿದ್ದೇವಯೇ ವಿನಃ ಕಸಗುಡಿಸಲು ಸಾಧ್ಯವಿಲ್ಲ ಎಂಬ ಕಾರಣಕ್ಕೆ ಕಡಿದು ಹಾಕುವುದೇ? ಬಿಸಿಲಿನ ತಾಪಮಾನ ಹೆಚ್ಚಾಗಿರುವ ಪ್ರದೇಶ, ಹಿರಿಯರು, ಶಿಕ್ಷಿತರು, ಉಪನ್ಯಾಸಕರು, ಶಿಕ್ಷಕರು ವಾಸವಾಗಿರುವ ಮನೆ, ಅದು ಅಲ್ಲದೆ ತಾವು ಜಾತಿಯಲ್ಲಿ ಕೂಡಾ ಮೇಲು ಎಂಬ ಭಾವನೆ ಉಳ್ಳವರು ಇಂತಹಾ ಸಲಹೆ ನೀಡಿಯಾರೆ? ಮರ ಕಡಿಸಿಹಾಕಿಸಿದವರು ಕೂಡಾ ಚಿಂತಿಸಲಿಲ್ಲವೇ ಅವರ ಮನವೊಲಿಸಲು ಪ್ರಯತ್ನಿಸಲಿಲ್ಲವೇ? ಡಿಗ್ರಿಗಳು, ಹುದ್ದೆಗಳು, ನೌಕರಿ, ಬಡ್ತಿ, ಸುಖ ಲೋಲುಪತೆಗಳ ಬೆನ್ನೇರಿ ನಡೆದ ನಾವು ಸಾಧಿಸುತ್ತಿರುವುದಾದರೂ ಏನು? ಅಕ್ಷರ ಜ್ಞಾನ, ಡಿಗ್ರಿ, ಉದ್ಯೋಗ, ಸಾಮಾಜೀಕರಣ ಪ್ರಕ್ರಿಯೆ ಇವುಗಳು ನಮ್ಮನ್ನು ಪರಿಸರ ಸಂರಕ್ಷಣೆಯ ನಿಟ್ಟಿನಲ್ಲಿ ಪ್ರಜ್ಞಾವಂತರನ್ನಾಗಿ, ಜಾಗೃತರನ್ನಾಗಿ ಮಾಡಲಿಲ್ಲವೆಂಬುವುದನ್ನು ಈ ಘಟನೆ ನಿರೂಪಿಸುತ್ತದೆಯೇ?

***

## 15. ಕಸ ವಿಷವಾಗುವ ಮುನ್ನ ಎಚ್ಚೆತ್ತುಕೊಳ್ಳಿ..

– ರಮೇಶ ಕುಮಾರ .ಡಿ ಬಡಿಗೇರ

**ಇಂದು ಕಸದ** (**ಘನತಾಜ್ಯ**) ಸಮಸ್ಯೆ **ಬೆಂಗಳೂ**ರು ಹಾಗೂ ಭಾರತದ ಅನೇಕ ಮಹಾನಗರಗಳಿಗೆ **ಬೃಹದಾಕಾರವಾಗಿ ಕಾಡಲು ಪ್ರಾರಂಭಿಸಿದೆ.ಹಿಂದೆ ಕೊಳಗೇರಿಗಳಿಗೆ ಮಾತ್ರ ಸೀಮಿತವಾಗಿದ್ದ ಈ ಸಮಸ್ಯೆ ಈಗ ಹೆಚ್ಚು ಕಡಿಮೆ ನಗರದ ಎಲ್ಲ ಪ್ರದೇಶಗಳ ಸಾಮಾನ್ಯ ಸಮಸ್ಯೆಯಾಗಿ ಜನರೂ ಕಸದೊಂದಿದೆ ಬದುಕುವ ಕಲೆಯನ್ನು ಕಲಿಯುತ್ತಿದ್ದಾರೇನೋ ಎನಿಸುತ್ತಿದೆ.ನಿರಂತರವಾಗಿ ಒಂದು ಕಡೆ ಕಸ ಸೃಷ್ಟಿಯಾಗುತ್ತಿದ್ದರೆ.ಅದರ ನಿರ್ವಹಣೆ ಕಾರ್ಯಜಾಲ ತೀರಾ ಅಸಮರ್ಪಕವಾಗಿದೆ.ಜೊತೆಗೆ ಅದಕ್ಕೆ ಜನರ ಪೂರ್ಣ ಸಹಕಾರ ಸಿಗುತ್ತಿಲ್ಲ**.

ಕಸದಲ್ಲಿ ಉಂಟಾಗುವ ರಾಸಾಯನಿಕ ವಿಭಜನೆಯಿಂದ ಇಂಗಾಲದ ಡೈ ಆಕ್ಸೈಡ ಇಂಗಾಲದ ಮಾನಾಕ್ಸೈಡ್ ನೈಟ್ರಸ್ ಆಕ್ಸೈಡ್ ಮತ್ತು ಮಿಥೇನನಂತಹ ವಿಷಾನಿಲಗಳು ಸೃಷ್ಟಿಯಾಗಿ ಸುತ್ತಮುತ್ತಲಿನ ಪರಿಸರವನ್ನು ಕಲುಷಿತಗೊಳಿಸುತ್ತವೆ.ಅದರಲ್ಲೂ ಮಳೆ ಬಿದ್ದಾಗ ತ್ಯಾಜ್ಯ ದ್ರವಾಂಶ ಭೂಮಿಗೆ ಇಂಗಿ ಮಣ್ಣಿನ ಗುಣಮಟ್ಟ ಹಾಳುಮಾಡುವುದರ ಜೊತೆಗೆ ಅಂತರ್ಜಲವನ್ನು ಕಲುಷಿತಗೊಳಿಸುತ್ತದೆ. ತ್ಯಾಜ್ಯವು ಕೊಳೆತಂತೆಲ್ಲ ಅದರಲ್ಲಿ ಸೃಷ್ಟಿಯಾಗುವ ಬೆಂಜಿನ,ಟಾಲೀನ್ನಂತಹ ಬಾಷ್ಪಅನಿಲಗಳು ರಕ್ತ ಕ್ಯಾನ್ಸರನಂತಹ ಮಾರಣಾಂತಿಕ ಕಾಯಿಲೆಗಳಿಗೆ ಗುರಿ ಮಾಡುತ್ತದೆ. ಈ ಜೈವಿಕ ಅನಿಲಗಳು ಸುತ್ತಮುತ್ತಲಿನ ಪ್ರದೇಶದಲ್ಲಿ ಹರಿಡಿದಷ್ಟು ಅಲ್ಲಿನ ಬೆಳೆಗಳ ಗುಣಮಟ್ಟ ಮತ್ತು ಉತ್ಪಾದನೆಯ ಪ್ರಮಾಣ ಕುಸಿಯುತ್ತದೆ.ವಿಶ್ವದಾದ್ಯಂತ ತ್ಯಾಜ್ಯದ ನೆಲಭರ್ತಿಯಿಂದ ಹೊರಹೊಮ್ಮುತ್ತಿರುವ ಅನಿಲಗಳಲ್ಲಿ ಶೇಕಡಾ 50% ರಷ್ಟು ಮಿಥೇನ್ ಇದ್ದು ಅದು ಜಾಗತಿಕ ತಾಪಮಾನದ ಏರಿಕೆಗೆ ಕಾರಣವಾಗುತ್ತದೆ ಮತ್ತು ಭೂ ರಕ್ಷಾ ಕವಚವಾಗಿರುವ ಓಜೋನ ಪದರವೂ ಕ್ಷೀಣಿಸಲು ಕಾರಣವಾಗಿದೆ. ಇಂಗಾಲದ ಡೈ ಆಕ್ಸೈಡ್ ಗಿಂತಲೂ ಸರಿಸುಮಾರು 25 ಪಟ್ಟು ತಾಪಮಾನವನ್ನು ಹೆಚ್ಚಿಸುವ ಸಾಮರ್ಥವನ್ನು ಮಿಥೇನ ಹೊಂದಿದೆ.ಆದರೆ ಈ ಜೈವಿಕ ಅನಿಲವನ್ನು ಸೂಕ್ತವಾಗಿ ಸಂಸ್ಕರಿದ್ರೇ ಆದರೆ ಅದು ಶಕ್ತಿಯ ಮೂಲವಾಗುವುದರಲ್ಲಿ ಸಂಶಯವಿಲ್ಲ.

ವಿಶ್ವದಾದ್ಯಂತ ಘನ ತ್ಯಾಜ್ಯದ ಮರುಬಳಕೆ ಹಾಗೂ ಅದಕ್ಕೆ ಸಂಬಂಧಿಸಿದ ಆರ್ಥಿಕ, ಸಾಮಾಜಿಕ,ರಾಜಕೀಯ,ಮತ್ತು ಪರಿಸರ ಕಾಳಜಿಯ ಮೇಲೆ ಸಂಶೋಧನೆಗಳು ನಡೆಯುತ್ತಲೇ ಇವೆ.ವಿಶೇಷವಾಗಿ ಕೆನಡಾ,ಜರ್ಮನಿ,ಆಸ್ಟ್ರೇಲಿಯಾ,ಹಾಲೆಂಡ್ ಮುಂತಾದ ದೇಶಗಳು ಅಳವಡಿಸಿಕೊಂಡಿರುವ ತ್ಯಾಜ್ಯ ನಿರ್ವಹಣೆಯ ಸೂತ್ರ ಸರಳವಾಗಿದೆ.ಅದೆಂದರೆ ' ಕಡಿಮೆ ಬಳಕೆ-ಮರುಬಳಕೆ-ಮರುಸಂಸ್ಕರಣೆ'. ತ್ಯಾಜ್ಯದಲ್ಲಿರುವ ಕ ಕಾಗದ ಪ್ಲಾಸ್ಟಿಕ,ಲೋಹ ಮುಂತಾದವುಗಳನ್ನು ವಿಂಗಡಿಸಿದರೆ ಸುಮಾರು ಶೇಕಡಾ 35 ರಷ್ಟು ತ್ಯಾಜ್ಯ ಮರುಬಳಕೆಯಾದಂತೆ ಇನ್ನುಳಿದ ತ್ಯಾಜ್ಯದಲ್ಲಿ ಸುಮಾರು ಶೇಕಡಾ 65 ರಷ್ಟು ತ್ಯಾಜ್ಯ ಬಹುತೇಕ ಸಾವಯವ ವಸ್ತುಗಳಿಂದ ಕೂಡಿದ್ದು ಜೈವಿಕ ಇಂಧನ ಉತ್ಪಾದಿಸಲು ಯೋಗ್ಯವಾಗಿರುತ್ತದೆ.ಇಂಧನ ಉತ್ಪಾದಿಸಿದ ನಂತರ ಉಳಿಯುವ ತ್ಯಾಜ್ಯವನ್ನು ಜೈವಿಕ ಗೊಬ್ಬರವನ್ನಾಗಿ ಉಪಯೋಗಿಸಬಹುದಾಗಿದೆ.ಅಥವಾ ತ್ಯಾಜ್ಯವನ್ನು ದಹಿಸಿ ನೀರನ್ನು ಕುದಿಸಿ ಅದರ ಆವಿಯಿಂದ ವಿದ್ಯುಚ್ಛಕ್ತಿಯನ್ನೂ ಪಡೆಯಬಹುದಾಗಿದೆ.ಇಷ್ಟೆಲ್ಲಾ ಉಪಯೋಗಗಳನ್ನು ಘನ ತ್ಯಾಜ್ಯದಿಂದ ಪಡೆಯುತ್ತಿರುವ ಮುಂದುವರೆದ ದೇಶಗಳಿಗೆ ತ್ಯಾಜ್ಯವು ಸಮಸ್ಯೆಯಾಗುವುದಾದರೂ ಹೇಗೆ? ಇದನ್ನು ಅರ್ಥಮಾಡಿಕೊಳ್ಳುವುದು ಅತೀ ಮುಖ್ಯವಾಗಿದೆ.



ಒಟ್ಟಾರೆಯಾಗಿ ತ್ಯಾಜ್ಯವನ್ನು ನೋಡುವ ನಮ್ಮ ದೃಷ್ಟಿಕೋನ ಬದಲಾಗಬೇಕು.ಚಿಂತನೆ,ವಿಚಾರಗಳು,ಸಂಶೋಧನೆಗಳು ಕಾರ್ಯರೂಪಕ್ಕೆ ಬರುವುದು ಅತೀ ಮುಖ್ಯವಾಗಿದೆ.ಪರಿಸರ ದಿನಾಚರಣೆ,ಭೂದಿನಾಚರಣೆ,ಓಝೋನ ದಿನ,ಹಾಗೂ 'ಸ್ವಚ್ಛ ಭಾರತ' ದ ಅಭಿಯಾನವೂ ಇಂತಹ ಯೋಜನೆಗಳಿಂದ ಸಾಕಾರಗೊಳ್ಳುತ್ತದೆ.

***

## 16. ದುಂಬಿ

– ಕರೀಷ್ಮಾ




**ತೋಟದಲಿ ಹೂವು ಅರಳಿದೆ**
**ದುಂಬಿ ಇನ್ನೂ ಮಲಗಿದೆ**
**ಗಂಧ ತುಂಬಿ ತುಳುಕುತಿದೆ**
**ಗಾಳಿ ಸ್ವಚ್ಛ ಬೀಸುತಿದೆ**
**ಹಕ್ಕಿಗಳು ಕಲರವ ಗೈಯುತಿವೆ**
**ದನಕರು ಮೇವ ಮೇಯುತಿವೆ**
**ಪ್ರಕೃತಿ ಹಚ್ಚಗೆ ಕಂಗೊಳಿಸುತಿವೆ**
**ಆದರೀದುಂಬಿ ಇನ್ನೂ ಮಲಗಿದೆ**
**ನಾ ಬಳಿ ಸಾಗಿದೆ ನೋಡಿದೆ**
**ತಿಳಿಯಿತು ಆ ದುಂಬಿ ಮಡಿದಿದೆ . . .**

### ಹಸಿರೆ ಉಸಿರು

**ಹಸಿರನ್ನ ನಂಬಿ ನಾ ಬಾಳುತಿಹೆನು**
**ನೀನೂ ಹಸಿರನ್ನೆ ಉಸುರಿ ಬಾಳುತಿರುವೆ**
**ಮತ್ತೇಕೆ ಹಸಿರನ್ನ ಹಿಸುಕುತಿಹೆವು?**
**ಹಸಿರೆ ಉಸಿರಲ್ಲವೇ ಹಸಿರೆ ಬಾಳಲ್ಲವೇ !!!**
**'ವನ ಮಹೋತ್ಸವ ಒಣಮಹೋತ್ಸವ'**

**ವನ ಮಹೋತ್ಸವ ಆಚರಿಸುತಿರುವೆ ಹೆಸರಿಗಾಗಿ**
**ಗಿಡ-ಮರ ನೆಡುತಿರುವೆ ಚಿತ್ರಪಟಕಾಗಿ**
**ಕಡಿಯದಿರಿ ಮರ, ನೆಡುತಿರಿ ಗಿಡ ಹೇಳುತಿರುವೆ ಬರಿ ಮಾತಿಗಾಗಿ**
**ಮರಕಡಿದವರ ದೂಷಿಸುತಿರುವೆ ಬರಿ ಪ್ರಚಾರಕಾಗಿ**
**ಸ್ವ ಇಚ್ಛೆ ಇಂದ ನೀನ್ ಎನ್ ಮಾಡಿರುವೆ ಮಾನವನಾಗಿ?**
**ಈ ಪರಿಸರದ ಉಳಿವಿಗಾಗಿ?**

***

## 17. ಮರದ ಅಳಲು...

— ಗಣಪತಿ ಭಟ್

ಹಸಿರು ಬಣ್ಣ ಹಚ್ಚಿ ನಿಂತ ವಯ್ಯಾರಿ ನಾನಲ್ಲ
ನಿನ್ನ ಉಪಯೋಗಕೆ ಬೆಳೆದ ಕೊರಡೂ ಅಲ್ಲ
ನಿನಗಾಗಿ ಮಾತ್ರ ನಾನೆಂಬ ಭಾವ ಯಾಕೆ
ನನಗೂ ಜೀವವಿದೆಯೆಂದು ನಿನಗೆ ತಿಳಿಯದೇಕೆ



ನಿನ್ನ ಉಪಯೋಗಕೆ ನೀ–ನನ್ನ ಕಡಿಯುತಿರುವೆ
ಕತ್ತರಿಸಿ–ತುಂಡರಿಸಿ ನಿನ್ನ ಮನೆಗಳಿಗೆ ಬಡಿಯುತಿರುವೆ
ಅಭಿವೃದ್ಧಿಯ ಹೆಸರಲಿ ನನ್ನ ಸಂಕುಲದ ವಿರುದ್ಧ ಯುದ್ಧ ಸಾರಿರುವೆ
ಗೋಡೆಯಲಿ ಮಾತ್ರ ಹಸಿರೇ ಉಸಿರೆಂದು ಬರೆಯುತಿರುವೆ

ನನಗೆ ಕೈಯಿಲ್ಲ, ಕಾಲಿಲ್ಲ, ಬಾಯಿಲ್ಲ
ನನ್ನೊಳಗೆ ಸ್ವಾರ್ಥ–ದ್ವೇಷ ಭಾವವಿಲ್ಲ
ಇದುವೆ ನನ್ನ ಮಾರಣಹೋಮಕೆ ನಿನಗೆ ಸಾಕಾಯಿತಲ್ಲ
ನಾನಿಲ್ಲದೇ ನೀನಿಲ್ಲ ಎಂಬ ಸತ್ಯವಿನ್ನು ಅರಿವಾದಂತಿಲ್ಲ

ನಾನು, ನಾ ನೀಡುವ ಉಸಿರು ಎಲ್ಲವೂ ನಿನಗೆ ಬೇಕು
ನನ್ನನು ಬದುಕಲು ಬಿಟ್ಟರೆ ನನಗಷ್ಟೇ ಸಾಕು...?!

***

## 18. ಪರಿಸರದ ಧಾನವ ಯಾರು?

**– ಗಿರಿಧರ ವೈದ್ಯ**

ಸಾಕಷ್ಟು ಬಿಸಿಲಿನ ತಾಪಕ್ಕೆ ಬೆಸತ್ತ ನಮಗೆ ಮಳೆಯ ರುಚಿ ಶುರುವಾಯಿತು. ಏನು ತಂಪಾದ ಗಾಳಿಗೆ ಮೈಯೊಡ್ಡಿ ನಿಂತೆವು. ಆದರೆ ಸದಾ ನನ್ನ ಮನೆಯ ಮುಂದೆ ಬೆಟ್ಟ, ಬೆಟ್ಟದ ತುಂಬಾ ಮಂಗಗಳ ಚಿರಾಟ ರಾತ್ರಿ ಕೇಳಿಸುತ್ತಿತ್ತು. ಬೇಸಿಗೆಯಲ್ಲಿ ಬೆಟ್ಟದ ಗಿಡಗಳು, ಬಳ್ಳಿಗಳು ಒಣಗಿ ಬರೆ ಬಂಡೆಗಳೆ ಕಾಣುತಿತ್ತು. ಆ ಬಂಡೆಗಳು ಕಾದು ನಮಗೆ ಕೂಡ ಜಳ ಬರುತಿದೆ ಆದರೆ ಈ ಮಂಗಗಳು ಹೇಗೆ ಆ ಬಂಡೆಗಳ ಮದ್ಯೆ ವಾಸ ಮಾಡುತ್ತಿವೆ ಅನಿಸಿತು. ನಮಗೂ ಜಳ ಮಂಗಗಳಿಗೂ ಜಳ ನೋಡಿ ಪ್ರತಿ ವರ್ಷದ ಕತೆಯೆ, ಆದರೆ ನನಗೆ ತಟ್ಟನೆ ನೆನಪಾಗಿದ್ದು ಬಾಲ್ಯದಲ್ಲಿ ಈ ಬೆಟ್ಟದಲ್ಲಿ ಇದ್ದ ಸಾಕಷ್ಟು ಸೀತಾಫಲ ಹಣ್ಣಿನ ಗಿಡಗಳು, ಬೆಟ್ಟದಲ್ಲಿ ಹಣ್ಣು ತಿಂದಿರುವದು ನೆನಪಾಯಿತು ಯಾಕೆ ಈಗ ಬೆಟ್ಟದಲ್ಲಿ ಸೀತಾಫಲ ಹಣ್ಣು ತಿನ್ನಲು ಆಗುತಿಲ್ಲಾ. ಯಾಕೆ ಈ ಗಿಡಗಳು ಕಡಿಮೆಯಾದವು, ಎಂದು ಆಲೋಚಿಸಿದಾಗ ನಾವೇ ತಾನೇ ಬೇಸಿಗೆಯಲ್ಲಿ ಗಿಡಗಳ ಎಲೆಗಳು ಒಣಗಿ ಉದರಿದಾಗ ಸೀತಾಫಲ, ಕವಳಿಕಾಯಿ, ಹುಲಪಿ ಹಣ್ಣಿನ ಗಿಡಗಳು ಕಡಿದು ಹೋಲೆಗೆ ಹಾಕಿ ಸುಟ್ಟಿರುವವರು ಯಾರು? ಹಣ್ಣು ಕೋಡುವ ಗಿಡಗಳು ಕೊಂದಿರುವದು ನಾವೆ.

ಇರಲಿ ಜೂನ್ ಬಂತಲ್ಲಾ ಮಳೆ ಕೂಡ ಪ್ರಾರಂಭವಾಯಿತಲ್ಲಾ ಈಗಲಾದರೂ ಗಿಡಗಳು ಚಿಗಿಯಬಹುದು ಎಂದು ಆಲೋಚಿಸಿದೆ ಅದರಂತೆ ಮಳೆ ಶುರುವಾಗಿದೆ. ನಮ್ಮ ಬೆಟ್ಟ ಮೊದಲಿನಂತೆ ಹಸಿರಿನಿಂದ ಕಂಗೊಳಿಸುತ್ತಿದೆ ನನಗೆ ನೋಡಿ ಕೂಸಿಯಾಗಿ ಬೆಟ್ಟವನ್ನು ಹತ್ತಿ ನೋಡಿದಾಗ ಅಲ್ಲಿರುವ ಹಸಿರು ಗಿಡಗಳು ಸೀತಾಫಲ ಗಿಡಗಳಲ್ಲಾ ಅವು ಸರ್ಕಾರ ಜಾಲಿ (ಮುಳ್ಳಿನ ಗಿಡಗಳು) ಈ ಗಿಡಗಳ ಬೀಜ ಯಾರು ತಂದು ಹಾಕಿದರೋ ಬೆಟ್ಟದ ತುಂಬಾ ಜಾಲಿ ಗಿಡಗಳು ಇದರ ಮದ್ಯೆ ನಮ್ಮ ಸೀತಾಫಲ ಗಿಡಗಳು ಹೇಗೆ ಬೇಳೆಯುವು,




ಮಂಗಗಳು ಬೆಟ್ಟಗಳಲ್ಲಿ ಗಿಡಗಳು ಚಿಗಿದಾಗ ಕೂಡ ನಮ್ಮ ಮನೆಗಳ ಮೇಲೆ ಯಾಕೆ ಹೋಡಾಡಿತಿವೆ, ನನಗೆ ತಿಳಿದಿರಲಿಲ್ಲಾ ಈಗ ಅರ್ಥವಾಯಿತು ಜಾಲಿ ಗಿಡಗಳು ಬೆಟ್ಟದಲ್ಲಿ ಬೇಳೆದಾಗ ಈ ಮಂಗಗಳು ಏನು ಆಹಾರ ಸಿಕ್ಕಿತು ನೀವೆ ಹೇಳಿ, ಹಣ್ಣು ನಮಗೂ ಇಲ್ಲಾ ಮಂಗಗಳಿಗೂ ಇಲ್ಲಾ. ಹಗಲಲ್ಲಿ ಮಂಗಗಳು ಊರುಗಳಲ್ಲಿ ಇರುತ್ತವೆ, ನಾವು ಬೆಟ್ಟದಲ್ಲಿ ಇರುತ್ತವೆ, ರಾತ್ರಿ ನಾವು ಊರುಗಳಲ್ಲಿ ಇರುತ್ತವೆ ಮಂಗಗಳು ಬೆಟ್ಟದಲ್ಲಿ ಇರುತ್ತವೆ ಹಾಗದರೇ ಈ ಸಮಯ ಬದಲಾವಣೆ ಮಾಡಿದವರು ಯಾರು? ನಾವೆ ಗಿಡಗಳು ಕಡೆಯಲು ಬೆಟ್ಟದಲ್ಲಿ ಹೋಗದಿದ್ದರೆ ಅವು ತಮ್ಮ ಮನೆಯಲ್ಲಿ ಇರುತಿದ್ದವು ಅಲ್ಲವೇ, ಜಾಲಿ ಗಿಡಗಳು ಎಷ್ಟೆ ಕಡಿದರು ಬೇಳೆಯುತ್ತವೆ ಆದರೆ ನಮ್ಮ ಸೀತಾಫಲ ಬೆಳೆಯುತ್ತಾ. ಸಮಾಜದಲ್ಲಿ ಕೂಡ ಕೆಟ್ಟವರು ಸದಾ ಬೇಳುತ್ತಾ ಇರುತ್ತಾರೆ ಅವರನ್ನು ಯಾರು ಬೇಳೆಸುವದಿಲ್ಲಾ ಆದರೆ ಒಳ್ಳೆಯವರನ್ನ ಬೇಳೆಸುವುದು ನಮ್ಮ ಕೆಲಸವಾಗಬೇಕಿದೆ ಅಲ್ವಾ. ದಿನ ಬೇಳಗಾದರೆ ಪತ್ರಿಕೆಗಳಲ್ಲಿ ಊರಲ್ಲಿ ಚಿರತೆ ನೂಗ್ಗಿದೆ, ಆನೆ ತೋಟಕ್ಕೆ ನೂಗ್ಗಿದೆ ಈ ವರ್ಷ ಮೊಸಳೆ ಹೊಲದಲ್ಲಿ ಬಂದಿದೆ ಎನ್ನುವದು ನೋಡಿದಾಗ ಪ್ರಾಣಿಗಳ ಅವು ಬಂದವಾ ನಾವು ಅವುಗಳನ್ನ ಬರುವಾಗೆ ಮಾಡಿದೆವಾ? ಕಾಡು ತೆಗೆದು ನಾಡು ಮಾಡಿದವರು ಯಾರು? ಅವುಗಳು ಬಂದಾಗ ಅರಣ್ಯ ಇಲಾಖೆಗೆ ಹೇಳಿ ಪಂಜರದಲ್ಲಿ ಹಿಡಿದು ಬಂದಿ ಮಾಡುವದು ಸರಿಯೇ? ಮೊಸಳೆ ಊರಲಿ ಯಾಕೆ ಬಂತು? ನದಿಯಲ್ಲಿ ನೀರು ಇದ್ದರೆ ಬರುತಿತ್ತೆ? ಸಾವಿರಾರು ವ್ಯರ್ಷದಿಂದ ರಚನೆಯಾದ ಮರಳು (ಉಸಕು) ಒಂದೆ ವರ್ಷದಲ್ಲಿ ಮರಳು ದಂಧೆ ಮಾಡುವವರು ಯಾರು? ನಮ್ಮ ಸ್ವಾರ್ಥಕ್ಕೆ ಪರಿಸರ ನಾಶ ಮಾಡಿದಾಗ ಕೊನೆಗೆ ಯಾರ ಉಸಿರು ನಿಲ್ಲುತ್ತೆ? ಕೃತಕ ಉಸಿರು ಎಷ್ಟು ದಿನ ಸೃಷ್ಟಿಸುವೆ ಮಾನವ?

***

## 19. ಅಂದಿನ ನಮ್ಮೂರು

– ಗುಂಡಪ್ಪ ಕಾಟೇಕರ

ಏನು ಚೆಂದಾಗಿತ್ತು ನಮ್ಮ ಊರು ನಾನು ಸಣ್ಣವನಿದ್ದಾಗ
ದಾರಿ ಎಲ್ಲಾ ಕೇರಿ ಎಲ್ಲಾ ಗಿಡಗಳ ಸಂಪಿಂದ
ಶಾಲೆಗೆ ನಾವು ಹೋಗುವಾಗ ಬಿಸಿಲೆ ಬಡಿತಿರಲಿಲ್ಲ
ಏರಡೂ ಕಡೆಗೆ ಮಂಟಪ ಹೊಡೆದಂಗಿತ್ತು ಗಿಡಗಳ ಸಾಲು




ಶಾಲೆಯ ಅಂಗಳದಲ್ಲೂ ಬೆಳೆದು ನಿಂತ ಮರಗಳ ಸೊಬಗು
ಅದರ ಕೆಳಗೆ ಬಣ್ಣ-ಬಣ್ಣದ ಹೂಗಿಡಗಳ ಸುಗಂದದ ಕಂಪು
ಕೈ ಕೈ ಹಿಡಿದು ಆಟವ ಆಡುತ ಮೋಜಿಲೆ ನಾವು ಕುಣಿದೇವು
ರಜೆಯ ದಿನದಲಿ ಕಳೆಯನು ತೆಗೆದು ನೀರನು ಎರೆದೇವು

ಇಂದಿನ ನನ್ನ ಊರಿನ ಬೀದಿಯ ಬದಿಯಲಿ ಗಿಡಗಳೆ ಇಲ್ಲ
ಸಿಮೆಂಟ ರಸ್ತೆಯ ಇಕ್ಕೆಲಗಳಲಿ ನಿಂತಿವೆ ಮೋಟಾರ ಕಾರು
ನೋಡೇನೆಂದರು ಹೂಬಳ್ಳಿಗಳಿಲ್ಲ
ಆಡಲು ಕುಣಿಯಲು ಎಲ್ಲಿಯೂ ಜಾಗವೂ ಇಲ್ಲ

ಬೇಸಿಗೆ ರಜೆಯಲಿ ಈಜಲು ಹೋಗಿದ ಬಾವಿಗಳೆಲ್ಲ ಬರಿದಾಗಿವೆ
ಕುಡಿಯಲು ಆಡಲು ನೀರಿಗೆ ಪರದಾಡುವ ಸ್ಥಿತಿ ಬಂದೊದಗಿದೆ
ಲಗೋರಿ, ಗೋಲಿ ಆಡಲು ಜಾಗವು ಇಲ್ಲ
ತಣ್ಣನೆ ಗಾಳಿಯು ಸವಿಯಲು ಬೇವಿನ ಮರದ ತಂಪೇ ಇಲ್ಲ

ಮರಗಳು ಇದ್ದರೆ ತಾನೆ ಗಾಳಿಯು ನೀರು ದರೆಯುವುದು
ಕಡಿದು ಕಡಿದು ಮಾರಿ ಹಣವನು ಹಿಡಿದು ಹಹೊರಟರೆ
ಗಾಳಿಯು ನೀರು ದೊರೆಯುವುದೇ?
ಬದುಕಿನ ದಾರಿ ತಿಳಿಯುವುದೇ?

ಯೋಚಿಸಿ ! ಚಿಂತಿಸಿ! ನಾಳೆಯ ಬಣ್ಣದ ಬದುಕಿಗೆ
ಮರಗಳು ಬೇಳೆಸೋಣ
ನಮ್ಮಯ ಮಕ್ಕಳು ಸುಂದರ ಹೂಬನದಿ ನಗುತಾ ಆಡುವುದನ್ನು ನೋಡೋಣ
ಪರಿಸರ ಸಂರಕ್ಷಿಸಿ ಮುಂದಿನ ಪೀಳಿಗೆಯನು ರಕ್ಷಿಸೋಣ.



## 20. Cool clicks:





**Bayalu Coordinators:**

1. **Gulbarga: Gundappa Katekar:** *gundappa.katekar@azimpremjifoundation.org*
2. **Mandya: Ravi B T:** *ravi@azimpremjifoundation.org*
3. **Bangalore: Raghavendra Herle:** *raghavendra.herle@azimpremjifoundation.org*
4. **Yadgir: Rajashri Nayak:** *rajashri.nayak@azimpremjifoundation.org*